ವಿಶೇಷ ಸಂಚಿಕೆ

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

www.prajavani.net




ಪುಟ 5
- ದಲಿತ ದೃಷ್ಟಿಪ್ರಜ್ಞೆಗೊಂದು ಪಾಠ
- ದಲಿತ ಕಾವ್ಯದ ಹೊಸ ತಲೆಮಾರು
- ಕರುಳು ಹಿಂಜಿ ಕಟ್ಟಿದ ಎನ್ಕೆ ಕವಿತೆ

ಪುಟ 6
- ಬೂದಿ ಮುಚ್ಚಿದ ಕೆಂಡ ಒಳ ಮೀಸಲಾತಿ
- ವಂಚನೆಯ ಮಾಯಾಜಾಲ
- ಭಿಕ್ಷೆಯಲ್ಲ, ಹಕ್ಕು


**ಶುಭಾಶಯ**
ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ನಿಮಿತ್ತ ವಿಶೇಷ ಸಂಚಿಕೆ ರೂಪಿಸಿರುವ ಈ ಸಂದರ್ಭದಲ್ಲಿ ಸಮಸ್ತ ಓದುಗರಿಗೆ, ಏಜೆಂಟರಿಗೆ, ಜಾಹೀರಾತುದಾರರಿಗೆ ಹಾರ್ದಿಕ ಶುಭಾಶಯಗಳು -ಸಂ




ಸಂಪುಟ 65 | ಸಂಚಿಕೆ : 104 | ಬೆಂಗಳೂರು | ಶನಿವಾರ ಏಪ್ರಿಲ್ 14, 2012 | B | ಪುಟ 24 | ₹3.00 | ಹೊರ ರಾಜ್ಯಗಳಲ್ಲಿ ವಿಮಾನ ಶುಲ್ಕ ₹ 2 ಪ್ರತ್ಯೇಕ






ಅತಿಥಿ ಸಂಪಾದಕರು
**ದೇವನೂರ ಮಹಾದೇವ**

ಅವರು ಕಾಣಲು ಬೆಂಕಿ ಕೆಂಡದಂತೆ ಇದ್ದರು. ಅವರು ಮಾತಾಡಿದರೆ ಅದರೊಳಗಿನ ಕಾವು ತಟ್ಟುತ್ತಿತ್ತು. ಇವರು ಪ್ರೊ.ಎಂ.ಮರಿಸ್ವಾಮಿ ಅಂತ. ಹಿಂದೂ ಅಸ್ಪೃಶ್ಯರಾಗಿ ಹುಟ್ಟಿದ ಇವರು ಬೌದ್ಧರಾಗಿ ನಿಧನರಾದರು. ಇವರು ಬದುಕಿದ್ದಾಗ ಎಸ್. ತುಕಾರಾಂ ಮಾಡಿರುವ ಸಂದರ್ಶನ ದಲಿತನೊಬ್ಬನ ಅಂತರಂಗವನ್ನು ತೆರೆದಿಟ್ಟಂತಿದೆ.

ಆ ಸಂದರ್ಶನದಲ್ಲಿನ ಒಂದು ಘಟನೆ ನನ್ನನ್ನು ಸದಾಕಾಲ ಕೊರೆಯುತ್ತಿರುತ್ತದೆ. ಆಗ ಮರಿಸ್ವಾಮಿಯವರು ಮಾಧ್ಯಮಿಕ ಶಾಲಾ ಶಿಕ್ಷಕರು. ಅವರು ತಮ್ಮ ಪಕ್ಕದೂರಿನ ಬಸ್ಸು ನಿಲ್ಲುತ್ತಿದ್ದ ಲಿಂಗಾಯತ ಬೀದಿಯಲ್ಲಿ ಬಸ್ಸಿಗೆ ಕಾಯುತ್ತಾ ಕೂತಿರುವಾಗ ಕಳ್ಳಂಬಳ್ಳಿ ಮಾದಪ್ಪ ಎಂಬ ವಯಸ್ಸಾದ ಹಳೆಯ ಕಾಲದ ವ್ಯಕ್ತಿ ತನ್ನ ಮನೆಯಿಂದ ಹೊರಬಂದು ಮರಿಸ್ವಾಮಿಯವರತ್ತ ಕೈ ತೋರಿಸುತ್ತಾ 'ಯಾರ‍್ಲಾ ಅವನು ಅಲ್ಲಿ ಕೂತಿರೋನು' ಎಂದು ತನ್ನ ಮಕ್ಕಳನ್ನು ಕೇಳುತ್ತಾರೆ. ಅವರ ಮಕ್ಕಳಿದ್ದವರು 'ಹೆಂಡದ ಮಾದಯ್ಯನ ಮಗ, ಮೇಷ್ಟ್ರು ಕೂತಿದ್ದಾರೆ' ಎಂದಾಕ್ಷಣವೇ ಆ ಯಜಮಾನನ ಬಾಯಿಂದ ಹೊಲಸು ಮಾತು ಬರುತ್ತದೆ. 'ಎದ್ದೇಳೋ ಮೇಲಕ್ಕೆ' ಎಂದು ಗದರಿಸುತ್ತಾರೆ. ಇದನ್ನು ನೆನಪಿಸಿಕೊಂಡು ಮರಿಸ್ವಾಮಿಯವರು 'ಆಗ ನಾವು ಬದುಕೋ ರೀತೀನೇ ಇದು ಅಂದುಕೊಂಡಿದ್ದೆವು. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬರಹಗಳನ್ನು ಓದಿದ ಮೇಲೆ ಅದು 'ಗಾಯ' ಎಂದು ಗೊತ್ತಾಯಿತೇ ವಿನಾ ಅಲ್ಲೀತನಕ ಅದು ಗಾಯ ಅಂತಲೇ ಅನಿಸಿರಲಿಲ್ಲ' ಎನ್ನುತ್ತಾರೆ.

ಭಾರತ ಗಾಯಗೊಂಡು ಬಿದ್ದಿದೆ. ಅದರ 'ಗಾಯ' ಅದಕ್ಕೆ ಗಾಯ ಅನಿಸುತ್ತಿಲ್ಲ. ಅಸ್ಪೃಶ್ಯತೆ ಜಾತಿ ಮತೀಯತೆಯ ಗಾಯ ನಂಜಾಗಿ ಮಿದುಳಿಗೇರಿ ಭಾರತ ಹುಚ್ಚಾಗಿದೆ. ಈ ಗಾಯವನ್ನೇ, ಈ ಹುಚ್ಚನ್ನೇ ಸಮಾಜದಲ್ಲಿ 'ಸಂಸ್ಕೃತಿ ಅಂತ', 'ಪರಂಪರೆ ಅಂತ' ಬಿಂಬಿಸಲಾಗಿದೆ. ಸಮಾಜವೂ ಹಾಗೇ ನಂಬಿಕೊಂಡಿದೆ. ಇಲ್ಲಿ ಹುಟ್ಟಿದ ವ್ಯಕ್ತಿಯ ಶಕ್ತಿ ಸಾಮರ್ಥ್ಯದ ಅರ್ಧದಷ್ಟು ಭಾಗ ಈ ಹುಚ್ಚಿನೊಡನೇ ಹೆಣಗಿ



ಸುಸ್ತಾಗುತ್ತಿದೆ. ಇದು ಗಾಯ, ಇದು ಹುಚ್ಚು ಎಂಬ ಅರಿವಿದ್ದಿದ್ದರೆ ಊರಾಚೆ ಎಸೆಯಲ್ಪಟ್ಟ ಅಸ್ಪೃಶ್ಯ ಸಮುದಾಯವು ಯಾರನ್ನೂ ಕೊಂದಿಲ್ಲ, ಯಾರನ್ನೂ ತುಳಿದಿಲ್ಲ, ಯಾರನ್ನೂ ಕೀಳಾಗಿ ನೋಡಿಲ್ಲ, ಹಾಗಾಗಿ ಈ ಸಮುದಾಯವೇ ಅವಮಾನಕ್ಕೆ ತುತ್ತಾಗುವ



ಬದಲು ಗೌರವಕ್ಕೆ ಪಾತ್ರವಾಗಬೇಕಾಗಿತ್ತು ಎಂಬ ಭಾವನೆ ಸಮಾಜದಲ್ಲಿ ಉಂಟಾಗುತ್ತಿತ್ತು. ಜತೆಗೆ, ಅಸ್ಪೃಶ್ಯರನ್ನಾಗಿಸಿ ಊರಾಚೆ ಎಸೆಯಲ್ಪಡಲು ಇರುವ ನೂರೆಂಟು ಕಾರಣಗಳಲ್ಲಿ ಚಾತುರ್ವರ್ಣದ ವಿಂಗಡನೆಯನ್ನು ಒಪ್ಪದವರು ಹಾಗೂ ಶೂದ್ರರಾಗಲು ಎಂದರೆ ಸೇವಕರಾಗಲು ಒಪ್ಪದ ಸ್ವಾಭಿಮಾನಿಗಳು ಅಸ್ಪೃಶ್ಯರಾಗಿ ಊರಾಚೆ ಎಸೆಯಲ್ಪಟ್ಟಿದ್ದೂ ಕಾಣಿಸುತ್ತಿತ್ತು. ಆಗ ಎಸೆಯಲ್ಪಟ್ಟು ಈಗ ಬಡತನ, ಅವಮಾನಗಳಿಂದ ಜರ್ಝರಿತವಾಗಿರುವ ಸಮುದಾಯದ ಹಿಂದಿನ ಚರಿತ್ರೆಯ ಘನತೆ ಕಾಣಿಸುತ್ತಿತ್ತು. ಅಸ್ಪೃಶ್ಯತೆಯ ತಾರತಮ್ಯಕ್ಕೆ ಒಳಗಾದವರು ಆ ನೋವನ್ನು 'ಬದುಕುವ ರೀತಿ' ಎಂದುಕೊಂಡರೆ ಅದು ಸ್ಥೂಲವಾಗಿ ದೈಹಿಕವಾಗಿರುತ್ತದೆ. ಅದೇ ಆ ನೋವು ತಾರತಮ್ಯಗಳು 'ಗಾಯ' ಎಂದು ಅರಿವಿಗೆ ಬಂದರೆ ಅವು ಸೂಕ್ಷ್ಮವಾಗಿ ಮನೋಮಯವಾಗಿ ಕ್ಷಣಕ್ಷಣವೂ ಹಿಂಸಿಸುತ್ತವೆ.

11ನೇಪುಟ ನೋಡಿ

## ಸಂಪಾದಕರ ಮಾತು

# ಕಾಳಜಿಗಳ ಮರುಶೋಧ

ಇತ್ತೀಚೆಗೆ ಒಂದು ಅಪರೂಪದ ಉಪನ್ಯಾಸವನ್ನು ಕೇಳುವ ಅವಕಾಶ ದೆಹಲಿಯಲ್ಲಿ ದೊರೆಯಿತು. ಅದು, ಭಾರತೀಯ ಪತ್ರಿಕೋದ್ಯಮದ ಬಗ್ಗೆ ಅಪಾರ ಆಸಕ್ತಿಯುಳ್ಳ, ಅಂತರರಾಷ್ಟ್ರೀಯ ಖ್ಯಾತಿಯ ಮಾಧ್ಯಮ ತಜ್ಞ ಪ್ರೊ.ರಾಬಿನ್ ಜೆಫ್ರಿ ಅವರದ್ದು. ತಮ್ಮ ಉಪನ್ಯಾಸದಲ್ಲಿ ಜೆಫ್ರಿ ಅವರು ಕೆಲವು ವಿಶೇಷ ಹೊಳಹುಗಳನ್ನು ಪ್ರಸ್ತಾಪಿಸಿದರು. ಭಾರತೀಯ ಮಾಧ್ಯಮ ಕಚೇರಿಗಳಲ್ಲಿ ದಲಿತರ ಪ್ರಾತಿನಿಧ್ಯ ಕಡಿಮೆ ಇರುವುದು ಹಾಗೂ ಪತ್ರಿಕೆಗಳ ಪುಟಗಳಲ್ಲಿ ಮತ್ತು ವಾಹಿನಿಗಳ ಕಾರ್ಯಕ್ರಮಗಳಲ್ಲಿ ದಲಿತರಿಗೆ ಸಮರ್ಪಕ ಪ್ರಾತಿನಿಧ್ಯ ದೊರೆಯುತ್ತಿಲ್ಲ ಎನ್ನುವುದು ಅವರ ಉಪನ್ಯಾಸದ ಮುಖ್ಯ ಆಶಯವಾಗಿತ್ತು. ಆ ಉಪನ್ಯಾಸ ಕೇಳಿದ ಕ್ಷಣದಿಂದ, ಮಾಧ್ಯಮಗಳಲ್ಲಿ 'ದಲಿತ ದನಿ'ಗೆ ಸೂಕ್ತ ಪ್ರಾತಿನಿಧ್ಯ ದೊರೆಯುತ್ತಿಲ್ಲ ಎನ್ನುವ ಜೆಫ್ರಿ ಅವರ ಆತಂಕ ನನ್ನನ್ನೂ ಕಾಡತೊಡಗಿತು.

ದಲಿತರ ಒಟ್ಟಾರೆ ಬದುಕು ಹಾಗೂ ದಲಿತ ಚಿಂತನೆಯ ಅಭಿವ್ಯಕ್ತಿಯ ಸಾಧ್ಯತೆಗಳ ಬಗ್ಗೆ ಗೆಳೆಯರೊಂದಿಗೆ, ಸಹೋದ್ಯೋಗಿಗಳೊಂದಿಗೆ ಚರ್ಚಿಸುತ್ತಿದ್ದಾಗ, ಪತ್ರಿಕೆಯ ಒಂದು ಸಂಚಿಕೆಯನ್ನೇ 'ದಲಿತ ವಿಶೇಷ' ಸಂಚಿಕೆಯನ್ನಾಗಿ ರೂಪಿಸುವ ಚಿಂತನೆ ಹೊಳೆಯಿತು. 'ಅಂಬೇಡ್ಕರ್ ಜಯಂತಿ' ಸನಿಹದಲ್ಲೇ ಇದ್ದುದು ನಮ್ಮ ಚಿಂತನೆಗೆ ಹುರುಪು ನೀಡಿತು. 'ದಲಿತ ವಿಶೇಷ ಸಂಚಿಕೆ'ಯ ಮೂಲಕ ಏಪ್ರಿಲ್ 14ರ ಅಂಬೇಡ್ಕರ್ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಿದೆವು. ಅತಿಥಿ ಸಂಪಾದಕರೊಬ್ಬರ ಉಸ್ತುವಾರಿಯಲ್ಲಿ ವಿಶೇಷ ಸಂಚಿಕೆಯನ್ನು ರೂಪಿಸುವ ಯೋಚನೆ ನಮ್ಮದಾಗಿತ್ತು. ಆ ಕ್ಷಣಕ್ಕೆ ತಕ್ಷಣ ಹೊಳೆದ ಏಕೈಕ ಹೆಸರು, ದೇವನೂರ ಮಹಾದೇವ ಅವರದು. ಎಂದಿನಂತೆ ದೇವನೂರರು ಆರಂಭದಲ್ಲಿ ಆತಂಕ ವ್ಯಕ್ತಪಡಿಸಿದರೂ ಪತ್ರಿಕೆಯ ಉದ್ದೇಶವನ್ನು ಮನಗಂಡು ಅತಿಥಿ ಸಂಪಾದಕರಾಗಲು ಮುಜುಗರದಿಂದಲೇ ಒಪ್ಪಿಕೊಂಡರು. ಕಡಿಮೆ ಕಾಲಾವಕಾಶದಲ್ಲೇ, ಜ್ವರವೇರಿಸಿಕೊಂಡ ಉತ್ಸಾಹದಲ್ಲಿ ಅವರು ಕಾರ್ಯತತ್ಪರವಾದುದರ ಫಲ, ಈಗ ನಿಮ್ಮ ಕೈಯಲ್ಲಿರುವ ಈ ಸಂಚಿಕೆ.

ದಲಿತರ ಬದುಕಿಗೆ ಸಂಬಂಧಿಸಿದ ಅನೇಕ ಮುಖಗಳನ್ನು ಒಳಗೊಳ್ಳುವಂತೆ ಈ ಸಂಚಿಕೆಯನ್ನು ರೂಪಿಸಲು ಪ್ರಯತ್ನಿಸಿದ್ದೇವೆ. ಈ ನಿಟ್ಟಿನಲ್ಲಿ ನಾಡಿನ ಪ್ರಮುಖ ದಲಿತ ಚಿಂತಕರು, ಬರಹಗಾರರು, ಕಲಾವಿದರು ನಮ್ಮ ಪ್ರಯತ್ನದಲ್ಲಿ ಜೊತೆಯಾಗಿದ್ದಾರೆ. ಇದು ದಲಿತ ದನಿಯ ವಿಶೇಷ ಸಂಚಿಕೆಯಾದರೂ, ಆಂತರ್ಯದಲ್ಲಿ ಇದು ಸೂಸುವುದು ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಪಾದಿಸಿದ ಸಮಾನತೆ, ಸ್ವಾತಂತ್ರ್ಯ ಮತ್ತು ಸೋದರತೆ'ಯ ದನಿಯನ್ನೇ ಎನ್ನುವುದು ನಮ್ಮ ಗಮನದಲ್ಲಿದೆ.

ಈ ವಿಶೇಷ ಸಂಚಿಕೆಯ ಸಂದರ್ಭದಲ್ಲಿ 'ಪ್ರಜಾವಾಣಿ' ನಡೆದುಬಂದ ಹಾದಿಯ ನೆನಪು ಅನಪೇಕ್ಷಣೀಯವೇನೂ ಅಲ್ಲ. ಭಾರತ ಪಡೆದುಕೊಂಡ ಸ್ವಾತಂತ್ರ್ಯದ ಅರ್ಥ ಮತ್ತು ವ್ಯಾಪ್ತಿಯನ್ನು ನಿರ್ವಚಿಸಿದ ಸಂವಿಧಾನವನ್ನು ನಾವು ಒಪ್ಪಿಕೊಳ್ಳುವುದಕ್ಕೆ ಎರಡು ವರ್ಷಗಳ ಹಿಂದೆ 'ಪ್ರಜಾವಾಣಿ' ತನ್ನ ಪ್ರಕಟಣೆಯನ್ನು ಆರಂಭಿಸಿತು. ಅಲ್ಲಿಂದ ಈ ತನಕ ಸಂಭವಿಸಿರುವ ಬದಲಾವಣೆಗಳು ಮತ್ತು ಪಲ್ಲಟಗಳು ಅನೇಕ. ಅವುಗಳನ್ನು ಕೇವಲ ಕಾಲದ ಕನ್ನಡಿಯಲ್ಲಿ ಕಂಡು ಪತ್ರಿಕೆಯಲ್ಲಿ ಪ್ರತಿಬಿಂಬಿಸುವಷ್ಟಕ್ಕೆ ಮಾತ್ರ 'ಪ್ರಜಾವಾಣಿ' ಸೀಮಿತಗೊಂಡಿಲ್ಲ. ಹೊರಗಿನ ಬದಲಾವಣೆಗಳನ್ನು ನಿರ್ವಚಿಸುವ, ವಿಶ್ಲೇಷಿಸುವ ಮತ್ತು ಪ್ರಭಾವಿಸುವ ಕ್ರಿಯೆಯನ್ನು ಪ್ರಜಾವಾಣಿ ನಿರಂತರವಾಗಿ ನಡೆಸುತ್ತಿದೆ. ಈ ಕ್ರಿಯೆಯಲ್ಲಿ ಅದು ತನ್ನನ್ನೂ ಬದಲಾವಣೆಗೆ ಒಡ್ಡಿಕೊಂಡಿದೆ. ಅಂತೆಯೇ, ನಿರಂತರ ಬದಲಾವಣೆಯ ಈ ಹಾದಿಯಲ್ಲಿ ಪತ್ರಿಕೆಯ ಮೂಲ ಉದ್ದೇಶವಾದ ಜನಪರ ಕಾಳಜಿಗಳಿಗೆ ಧಕ್ಕೆ ಬಾರದಂತೆ ಎಚ್ಚರವಹಿಸಿದ್ದೇವೆ. ಆ ಕಾಳಜಿ ಮತ್ತು ವಿವೇಕದ ತಾಜಾ ಉದಾಹರಣೆ ಇಂದಿನ ವಿಶೇಷ ಸಂಚಿಕೆ.



shanthkumar@prajavani.co.in

### ರಿಷಿ ವಿರುದ್ಧ ಪ್ರಕರಣ

ನವದೆಹಲಿ (ಪಿಟಿಐ): ಸೇನಾಪಡೆಗೆ ಟಟ್ರಾ ಟ್ರಕ್‌ಗಳ ಪೂರೈಕೆಗೆ ಸಂಬಂಧಿಸಿದಂತೆ ಟಟ್ರಾ ಸಿಪೋಕ್ಸ್ ಯುಕೆ ಹಾಗೂ ಬೆಮೆಲ್ ನಡುವೆ ಆದ ಒಪ್ಪಂದದಲ್ಲಿ ಹಣಕಾಸು ಅವ್ಯವಹಾರ ನಡೆದಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯ (ಇಡಿ) ವೆಕ್ಟ್ರಾ ಮುಖ್ಯಸ್ಥ ರವೀಂದರ್ ರಿಷಿ ವಿರುದ್ಧ ಅಕ್ರಮ ಹಣ ಚಲಾವಣೆಯ ಪ್ರಕರಣ ದಾಖಲಿಸಿದೆ.

ಸಿಬಿಐ ಹಾಗೂ ಇತರ ಅಧಿಕೃತ ಮೂಲಗಳಿಂದ ಮಾಹಿತಿ ಪಡೆದಿರುವ ಜಾರಿ ನಿರ್ದೇಶನಾಲಯ ಪ್ರಕರಣ ದಾಖಲಿಸಿದ್ದು, ರಿಷಿ ಹಾಗೂ ಇತರರನ್ನು ಈ ಸಂಬಂಧ ಪ್ರಶ್ನಿಸಲಿದೆ.

### ಕಾವೇರಿ: ಅರ್ಜಿ ತಿರಸ್ಕಾರ

ನವದೆಹಲಿ: ಕರ್ನಾಟಕವು ಕಾವೇರಿ ನದಿ ಪಾತ್ರದ ಅಣೆಕಟ್ಟುಗಳಿಂದ ಅಧಿಕ ನೀರು ಹರಿಸಿಕೊಳ್ಳುತ್ತಿದೆ ಎಂದು ದೂರಿ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಅರ್ಜಿಯ ಬಗ್ಗೆ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿತು.

▸ ಪುಟ 4

# ಸಾಮಾಜಿಕ ನ್ಯಾಯ ಮರೀಚಿಕೆ



**ವಿ.ಎಸ್.ಸುಬ್ರಹ್ಮಣ್ಯ**

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಬಜೆಟ್‌ನಲ್ಲೂ ಸಾಮಾಜಿಕ ನ್ಯಾಯ ಒದಗಿಸುವ ಉಪ ಯೋಜನೆಗಳು ಜಾರಿಗೆ ಬಂದು ಎರಡು ದಶಕ ಕಳೆದಿದೆ. ರಾಜ್ಯ ಬಜೆಟ್ ಮೂಲಕವೇ ಹತ್ತಾರು ಸಾವಿರ ಕೋಟಿ ರೂಪಾಯಿ ಈ ಉಪ ಯೋಜನೆಗಳ ಅಡಿಯಲ್ಲಿ ಹರಿದುಹೋಗಿದೆ. ಇದು ದಲಿತರ ಬದುಕಿನಲ್ಲಿ ಬೆಳಕು ಮೂಡಿಸಿದೆಯೇ ಎಂದು ಹುಡುಕ ಹೊರಟರೆ 'ಸಂಭ್ರಮ'ದ ಸುಳಿವೇ ಸಿಗುವುದಿಲ್ಲ.

ದೇಶದಲ್ಲಿ ತಮ್ಮ ಸಮುದಾಯದ ಜನರ ಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲೂ ಪಾಲು ಪಡೆಯುವ ಅವಕಾಶ ದೊರೆತಿರುವುದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮಾತ್ರ. 1976ರಲ್ಲಿ ಈ ಯೋಜನೆಗಳು ರೂಪುಗೊಂಡಿದ್ದವು. ಆರನೇ ಪಂಚವಾರ್ಷಿಕ (1980–1985) ಯೋಜನೆಯ ಅವಧಿಯಲ್ಲಿ ಕೇಂದ್ರ ಯೋಜನಾ ಆಯೋಗ ಈ ಉಪ ಯೋಜನೆಗಳ ಜಾರಿಗೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿತು. ಅಂದಿನಿಂದ ಜನಸಂಖ್ಯೆಗೆ ಅನುಗುಣವಾಗಿ ಯೋಜನಾ ವೆಚ್ಚದಲ್ಲಿ ಈ ವರ್ಗಗಳಿಗೆ ಪಾಲು ನೀಡದ ಹೊರತು ಬಜೆಟ್‌ಗೆ ಆಯೋಗದ ಒಪ್ಪಿಗೆ ಪಡೆಯುವುದು ಅಸಾಧ್ಯ.

ಆರಂಭದಲ್ಲಿ ಈ ಎರಡೂ ವರ್ಗಗಳಿಗೆ ಬಜೆಟ್‌ನ ಒಟ್ಟು ಯೋಜನಾ ವೆಚ್ಚದ ಶೇಕಡ 18ರಷ್ಟು ಮೊತ್ತ ಮೀಸಲಾಗುತ್ತಿತ್ತು. 2001ರ ಜನಗಣತಿ ನಂತರ ಈ ಮೊತ್ತ ಶೇ 22.75ಕ್ಕೆ ಏರಿದೆ. ಪರಿಶಿಷ್ಟ ಜಾತಿ ಉಪ ಯೋಜನೆಗೆ ಶೇ 16.20ರಷ್ಟು ಯೋಜನಾ ವೆಚ್ಚ ಮೀಸಲಾದರೆ, ಪರಿಶಿಷ್ಟ ಜಾತಿಯ ಉಪ ಯೋಜನೆಗೆ ಶೇ 6.55ರಷ್ಟು ಅನುದಾನ ಒದಗಿಸಲಾಗುತ್ತಿದೆ.

ರಾಜ್ಯದಲ್ಲೂ ಪರಿಶಿಷ್ಟ ಜಾತಿ ಉಪ ಯೋಜನೆಗೆ (ಎಸ್‌ಸಿಎಸ್‌ಪಿ) ಶೇ 16.20 ಮತ್ತು ಪರಿಶಿಷ್ಟ ಪಂಗಡದ ಉಪ ಯೋಜನೆಗೆ (ಟಿಎಸ್‌ಪಿ) ಶೇ 6.55ರಷ್ಟು ಅನುದಾನ ಒದಗಿಸಲಾಗುತ್ತಿದೆ. ಕಳೆದ ಏಳು ವರ್ಷಗಳಲ್ಲಿ ಬಜೆಟ್‌ನ ಯೋಜನಾ ಅನುದಾನದಲ್ಲಿ ಈ ಎರಡೂ ಉಪ ಯೋಜನೆಗಳಿಗೆ 30,000 ಕೋಟಿ ರೂಪಾಯಿಗೂ ಹೆಚ್ಚು ಮೊತ್ತ ನಿಗದಿ ಮಾಡಲಾಗಿತ್ತು. ಈ ಪೈಕಿ 20,000 ಕೋಟಿ ರೂಪಾಯಿಗೂ ಹೆಚ್ಚು ವೆಚ್ಚವಾಗಿದೆ.

ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುಷ್ಠಾನದ ನೋಡಲ್ ಇಲಾಖೆಯಾಗಿರುವ ಸಮಾಜ ಕಲ್ಯಾಣ ಇಲಾಖೆಯ ದಾಖಲೆಗಳ ಪ್ರಕಾರ ಎಲ್ಲ ವರ್ಷಗಳಲ್ಲೂ ಬಜೆಟ್‌ನ ಯೋಜನಾ ವೆಚ್ಚದಲ್ಲಿ ಶೇ 22.75ರಷ್ಟು ದಲಿತ ಕಲ್ಯಾಣ ಕಾರ್ಯಕ್ರಮಕ್ಕೆ ನಿಗದಿಯಾಗುತ್ತಿದೆ. ಬಹುತೇಕ ವರ್ಷಗಳಲ್ಲಿ ಘೋಷಣೆಯಾದ ಮೊತ್ತದಲ್ಲಿ ಶೇ 75ಕ್ಕಿಂತ ಹೆಚ್ಚು ಬಿಡುಗಡೆ ಆಗಿದೆ. ಅದು ಪೂರ್ಣ ಖರ್ಚಾಗಿದೆ. ಇಷ್ಟೆಲ್ಲ ಆದರೂ ಬಡತನ ರೇಖೆಗಿಂತ ಕೆಳಗಿರುವ ದಲಿತರ ಸಂಖ್ಯೆಯಲ್ಲೂ ಕೊಂಚ ಇಳಿಕೆ ಆಗಿಲ್ಲ!

**20 ಸಾವಿರ ಕೋಟಿ:** 2005–06ರಿಂದ 2011–12ರವರೆಗೆ ರಾಜ್ಯ ಬಜೆಟ್‌ನಲ್ಲಿ ಎಸ್‌ಸಿಎಸ್‌ಪಿ ಯೋಜನೆಗೆ 19,051 ಕೋಟಿ ರೂಪಾಯಿ ಮೀಸಲಿಡಲಾಗಿತ್ತು. ಈ ಪೈಕಿ ರೂ 14,947 ಕೋಟಿ ಬಿಡುಗಡೆ ಆಗಿದ್ದು, ವೆಚ್ಚವನ್ನೂ ಮಾಡಲಾಗಿದೆ. ಇದೇ ಅವಧಿಯಲ್ಲಿ ಟಿಎಸ್‌ಪಿ ಅಡಿಯಲ್ಲಿ ಏಳು ಸಾವಿರ ಕೋಟಿ ರೂಪಾಯಿಗೂ ಹೆಚ್ಚು ವೆಚ್ಚವಾಗಿದೆ.

ರಾಜ್ಯದ ಯೋಜನಾ ಗಾತ್ರದಲ್ಲಿ ಹೆಚ್ಚಳವಾದಂತೆಲ್ಲ ಉಪ ಯೋಜನೆಗಳ ಅನುದಾನದ ಮೊತ್ತವೂ ಏರುತ್ತಿದೆ. 2005–06ರಲ್ಲಿ ರಾಜ್ಯ ಬಜೆಟ್‌ನಲ್ಲಿ ಎಸ್‌ಸಿಎಸ್‌ಪಿಗೆ ನಿಗದಿ ಮಾಡಿದ್ದ ಅನುದಾನದ ಮೊತ್ತ 628.80 ಕೋಟಿ ರೂಪಾಯಿ ಇತ್ತು. 2012–13ರ ಬಜೆಟ್‌ನಲ್ಲಿ ಈ ಬಾಬ್ತು ರೂ 5,125 ಕೋಟಿ ಮೀಸಲಿಡಲಾಗಿದೆ.

11ನೇ ಪುಟ ನೋಡಿ

*ಸೋಮಣ್ಣಗೆ ಸಮನ್ಸ್; ಸಿ.ಟಿ.ರವಿ ವಿರುದ್ಧ ತನಿಖೆ*

# ಎರಡು ಪ್ರಕರಣಗಳಲ್ಲಿ 'ಬಿ' ವರದಿ ತಿರಸ್ಕಾರ

**ಪ್ರಜಾವಾಣಿ ವಾರ್ತೆ**

ಬೆಂಗಳೂರು: ಎರಡು ಪ್ರತ್ಯೇಕ ಖಾಸಗಿ ದೂರುಗಳಿಗೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ 'ಬಿ' ವರದಿಗಳನ್ನು ಲೋಕಾಯುಕ್ತ ವಿಶೇಷ ನ್ಯಾಯಾಲಯ ಶುಕ್ರವಾರ ತಿರಸ್ಕರಿಸಿದೆ. ವಸತಿ ಸಚಿವ ವಿ.ಸೋಮಣ್ಣ ವಿರುದ್ಧದ ಪ್ರಕರಣದಲ್ಲಿ ನೇರವಾಗಿ ಸಮನ್ಸ್ ಜಾರಿಗೊಳಿಸಿದ್ದರೆ, ಶಾಸಕ ಸಿ.ಟಿ.ರವಿ ವಿರುದ್ಧದ ದೂರಿನ ಬಗ್ಗೆ ಹೆಚ್ಚಿನ ತನಿಖೆಗೆ ಆದೇಶಿಸಲಾಗಿದೆ.

ನಾಗದೇವನ ಹಳ್ಳಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸ್ವಾಧೀನಪಡಿಸಿಕೊಂಡಿದ್ದ 22 ಗುಂಟೆ ಭೂಮಿಯನ್ನು ಕಾನೂನುಬಾಹಿರವಾಗಿ ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟ ಆರೋಪದ ಮೇಲೆ ಸಾಫ್ಟ್ ವೇರ್ ಎಂಜಿನಿಯರ್ ರವಿಕೃಷ್ಣಾ ರೆಡ್ಡಿ ಖಾಸಗಿ ದೂರು ಸಲ್ಲಿಸಿದ್ದರು. ನ್ಯಾಯಾಲಯದ ಆದೇಶದಂತೆ ದೂರಿನ ಬಗ್ಗೆ ತನಿಖೆ ನಡೆಸಿದ್ದ ಲೋಕಾಯುಕ್ತ ಪೊಲೀಸರು, ಆರೋಪದಲ್ಲಿ ಹುರುಳಿಲ್ಲ ಎಂದು ಮಾರ್ಚ್ 21ರಂದು 'ಬಿ' ವರದಿ ಸಲ್ಲಿಸಿದ್ದರು.

ಶುಕ್ರವಾರ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶ ಎನ್. ಕೆ.ಸುಧೀಂದ್ರ ರಾವ್ ಅವರು, 'ಬಿ' ವರದಿ ತಿರಸ್ಕರಿಸಿ ಆದೇಶ ಹೊರಡಿಸಿದರು. ಪ್ರಕರಣದ ಆರೋಪಿಗಳಾದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಸಚಿವ ವಿ.ಸೋಮಣ್ಣ, ಅವರ ಪತ್ನಿ ಶೈಲಜಾ ಮತ್ತು ಪ್ರಕರಣದಲ್ಲಿ ಹೆಸರಿಸಲಾದ ಭೂಮಿಯ ಮೂಲ ಮಾಲೀಕ ಲಿಂಗಣ್ಣ ಅವರಿಗೆ ಸಮನ್ಸ್ ಜಾರಿ ಮಾಡಿದ್ದು, ಏಪ್ರಿ30ರಂದು ವಿಚಾರಣೆಗೆ ಹಾಜರಾಗುವಂತೆ ಆದೇಶಿಸಿದರು.

4ನೇ ಪುಟ ನೋಡಿ

## ಚಿನಕುರಳಿ

ಪಿ. ಮಹಮ್ಮದ್




### ಪ್ರೊಫೆಸರ್ ಬಂಧನ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಅವಹೇಳನಕಾರಿಯಾಗಿ ಚಿತ್ರಿಸಿದ ಕಾರ್ಟೂನ್‌ಗಳನ್ನು ಅಂತರ್ಜಾಲದಲ್ಲಿ ಪ್ರಸಾರ ಮಾಡಿದ ಜಾದವ್‌ಪುರ ವಿವಿಯ ಪ್ರೊ. ಅಂಬಿಕೇಶ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

### ಪೌರಕಾರ್ಮಿಕರ ಧರಣಿ

ಬೆಂಗಳೂರು: ಸರ್ಕಾರ ನಿಗದಿಪಡಿಸಿರುವ ಕನಿಷ್ಠ ವೇತನ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬಿಬಿಎಂಪಿ ಗುತ್ತಿಗೆ ಪೌರ ಕಾರ್ಮಿಕರು ನಗರದಲ್ಲಿ ಶುಕ್ರವಾರ ಧರಣಿ ನಡೆಸಿದರು.

▸ ಪುಟ 2









ಬೆಂಗಳೂರು: ಶುದ್ಧ ಬೆಳ್ಳಿ ಕೆಜಿಗೆ ರೂ 56,800; ಸ್ಟ್ಯಾಂಡರ್ಡ್ ಚಿನ್ನ ಹತ್ತು ಗ್ರಾಂಗೆ ರೂ 29,646; ಒಡವೆ ಚಿನ್ನ ಒಂದು ಗ್ರಾಂಗೆ ರೂ 2,687



# ಸ್ವಾತಂತ್ರ್ಯ • ಸಮಾನತೆ • ಸೋದರತೆ

# ಆಂಜನಪ್ಪಗೆ ಸಂಕಷ್ಟಗಳೇ ಸಂಗಾತಿ



**ರಾಹುಲ ಬೆಳಗಲಿ**

ಕಲಾವಿದರೊಬ್ಬರಿಗೆ ರಾಜ್ಯ ಸರ್ಕಾರದ ವತಿಯಿಂದಲ್ಲದೇ ರಾಜ್ಯಮಟ್ಟದ ಹಲವಾರು ಪ್ರಶಸ್ತಿಗಳು ದೊರೆತುಬಿಟ್ಟರೆ, ಅವರು ಹಿರಿಹಿರಿ ಹಿಗ್ಗುತ್ತಾರೆ. ಖ್ಯಾತನಾಮರ ಪಟ್ಟಿಗೆ ಸೇರುವುದಲ್ಲದೇ ಹಲವಾರು ಸೌಲಭ್ಯಗಳಿಗೂ ಪಾತ್ರರಾಗುತ್ತಾರೆ. ಆದರೆ ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ತಾಲ್ಲೂಕಿನ ಹಿರಿಯ ಕಲಾವಿದ ಮುಖವೀಣೆ ಆಂಜನಪ್ಪ ಅವರು ಹಲವಾರು ಪ್ರಶಸ್ತಿ, ಪುರಸ್ಕಾರಗಳಿಗೆ ಭಾಜನರಾದರೂ ಯಾವುದೇ ಸೌಲಭ್ಯಗಳಿಲ್ಲದೇ ಸಂಕಷ್ಟಗಳನ್ನೇ ಸಂಗಾತಿಗಳನ್ನಾಗಿಸಿಕೊಂಡು ಪುಟ್ಟ ಮನೆಯಲ್ಲಿ ವಾಸವಿದ್ದಾರೆ.

ಗುಡಿಬಂಡೆ ತಾಲ್ಲೂಕಿನ ಬೀಚಗಾನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಗವಿಕುಂಟಹಳ್ಳಿ ಎಂಬ ಕುಗ್ರಾಮದಲ್ಲಿ ನೆಲೆಸಿರುವ ಆಂಜನಪ್ಪ ಅವರು ಮುಖವೀಣೆ ನುಡಿಸುವುದರಲ್ಲಿ ನಿಷ್ಣಾತರು. ದಲಿತ ಸಮುದಾಯದ ಆದಿಕರ್ನಾಟಕ ಜನಾಂಗಕ್ಕೆ ಸೇರಿದ ಅವರು ಮುಖವೀಣೆ ನುಡಿಸುವುದನ್ನೇ ಜೀವನಕ್ಕೆ ಆಧಾರವಾಗಿಸಿಕೊಂಡಿದ್ದಾರೆ. ರಾಜ್ಯ ಜಾನಪದ ಕಲಾಶ್ರೀ ಸೇರಿದಂತೆ ಹಲವು ಪ್ರಶಸ್ತಿಗಳು ಲಭಿಸಿವೆ. ಮನೆಗೆ ಭೇಟಿ ನೀಡುವ ಪ್ರತಿಯೊಬ್ಬರಿಗೂ ಪ್ರಶಸ್ತಿ ಫಲಕಗಳನ್ನು ತೋರಿಸುವ ಅವರು, 'ಪ್ರಶಸ್ತಿಗಳು ಹಲವಾರು ಬಂದಿವೆ. ಆದರೆ ಮನೆಯಲ್ಲಿನ ಆರ್ಥಿಕ ಪರಿಸ್ಥಿತಿ ಮಾತ್ರ ಸುಧಾರಿಸಿಲ್ಲ' ಎಂದು ನೋವಿನಿಂದ ಹೇಳುತ್ತಾರೆ.

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕು ಚಿಕ್ಕದಾಳವಟ್ಟ ಗ್ರಾಮದ ಬಡ ಕುಟುಂಬದಲ್ಲಿ ಜನಿಸಿದ ಅವರ ಮನೆಯಲ್ಲಿ ಸಂಕಷ್ಟ ವ್ಯಾಪಕವಾಗಿತ್ತು. ಭಿಕ್ಷೆ ಬೇಡಿಕೆಕೊಂಡು ಹೊಟ್ಟೆ ತುಂಬಿಸಿಕೊಳ್ಳುವಂತಹ ಪರಿಸ್ಥಿತಿ ಇತ್ತು.

ತಾತಾ ಮತ್ತು ತಂದೆಯವರಿಂದ ಮುಖವೀಣೆ ನುಡಿಸುವುದನ್ನು ಕಲಿತ ಆಂಜನಪ್ಪ ಅದನ್ನೇ ಕಾಯಕವಾಗಿಸಿಕೊಂಡಿದ್ದಾರೆ. ಹದಿನಾಲ್ಕು ಮಕ್ಕಳಲ್ಲಿ ಒಂಬತ್ತು ಮಕ್ಕಳು ಅವರೊಂದಿಗೆ ಇದ್ದಾರೆ. ಆದರೆ ಅವರ‍್ಯಾರೂ ಸಂಗೀತ ಕಲಿಯಲು ಆಸಕ್ತಿ ತೋರುತ್ತಿಲ್ಲ ಎಂಬ ನೋವು ಆಂಜನಪ್ಪ ಅವರಿಗೆ ಕಾಡುತ್ತಿದೆ.



ಮುಖವೀಣೆ ಆಂಜನಪ್ಪ

ಆಂಧ್ರಪ್ರದೇಶ, ತಮಿಳುನಾಡು, ಕೇರಳ, ನವದೆಹಲಿ ಸೇರಿದಂತೆ ವಿವಿಧೆಡೆ ಸಂಚರಿಸಿ, ಹಲವಾರು ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ. 1996ರಲ್ಲಿ ಜಾನಪದ ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ, 1998ರಲ್ಲಿ ಜಾನಪದ ಕಲಾಶ್ರೀ ಪ್ರಶಸ್ತಿ, ಸ್ಟೇಟ್ ಬ್ಯಾಂಕ್ ಮೈಸೂರು ಸಂಸ್ಥೆಯ ರಾಜ್ಯೋತ್ಸವ ಪ್ರಶಸ್ತಿ, ಎಲ್ಎಚ್‌ಆರ್ ಪತ್ರಿಕಾ ಪ್ರಶಸ್ತಿ, ಎಲ್.ಬಸವರಾಜು ಪ್ರಶಸ್ತಿ, ಬಿ.ವಿ.ಕಾರಂತ ರಂಗಾಯಣ ಪ್ರಶಸ್ತಿ, ಆದರ್ಶಶೃಂಗ ಪ್ರಶಸ್ತಿ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಪ್ರಶಸ್ತಿ, ಜಾನಪದ ಲೋಕೋತ್ಸವ ಪ್ರಶಸ್ತಿ, ಮೇಳಾದೇವಿ ಪ್ರಶಸ್ತಿ ಸೇರಿದಂತೆ ಹತ್ತು ಹಲವಾರು ಪ್ರಶಸ್ತಿಗಳಿಗೆ ಅವರು ಪಾತ್ರರಾಗಿದ್ದಾರೆ.

'ಗ್ರಾಮದ ಬಳಿ ಜೀವನೋಪಾಯಕ್ಕಾಗಿ 4.5 ಎಕರೆ ಭೂಮಿಗೆ ಸರ್ಕಾರವು ಅಧಿಕೃತ ಸಾಗುವಳಿ ಚೀಟಿ ನೀಡಿತ್ತು. ಆದರೆ ಸಾಗುವಳಿ ಮಾಡಲು ಸಾಧ್ಯವಾಗದ ಕಾರಣ 2.5 ಎಕರೆ ಒಣಭೂಮಿ ಮಾತ್ರವೇ ಉಳಿದುಕೊಂಡಿದೆ'.

'ಪ್ರಶಸ್ತಿ, ಪುರಸ್ಕಾರಗಳನ್ನು ಸಂರಕ್ಷಿಸಿಡಲು ಮನೆಯು ಶಿಥಿಲಾವಸ್ಥೆಯಲ್ಲಿದೆ. ಆಶ್ರಯ ಮನೆ ನಿರ್ಮಾಣಕ್ಕೆ ಪಾಯ ಹಾಕಲಾಗಿದೆಯಾದರೂ ಮನೆ ಕಟ್ಟಲು ಕಾಸಿಲ್ಲ. ಮಕ್ಕಳು ಸಂಗೀತ ಕಲಿಯಲು ಆಸಕ್ತಿ ತೋರುತ್ತಿಲ್ಲ'.

'ಮುಂದಿನ ದಿನಗಳಲ್ಲಿ ಮುಖವೀಣೆ ಸಂಗೀತ ಉಳಿಯುವುದೋ ಅಥವಾ ಇಲ್ವೊ ಎಂಬುದು ಗೊತ್ತಿಲ್ಲ' ಎಂದು ಆಂಜನಪ್ಪ ನೊಂದು ನುಡಿಯುತ್ತಾರೆ.

## ...ಒಂದನೇ ಪುಟದಿಂದ

# ಸಮಾನತೆಯ ಕನಸನ್ನು ಮತ್ತೆ ಕಾಣುತ್ತಾ...



ಆಗ ಬಿಡುಗಡೆಗೆ ಚಡಪಡಿಕೆ ಉಂಟಾಗುತ್ತದೆ.ಈ ಹಿನ್ನೆಲೆಯಲ್ಲೇ ಹಿಂದೊಂದು ಸಲ ನಾನು 'ಚಿಕಿತ್ಸೆ ಯಾರಿಗೆ ಬೇಕಾಗಿದೆ? ಮೇಲು–ಕೀಳು ರೋಗವನ್ನೇ ಸಂಸ್ಕೃತಿಯೆಂದುಕೊಂಡಿರುವವರಿಗೆ ಸಾಂಸ್ಕೃತಿಕ ಚಿಕಿತ್ಸೆ, ತಾರತಮ್ಯದ ಕಟ್ಟುಪಾಡುಗಳನ್ನೇ ಸಂಪ್ರದಾಯ ಎಂದುಕೊಂಡಿರುವವವರಿಗೆ ಸಾಮಾಜಿಕ ಚಿಕಿತ್ಸೆ, ಬಡತನದಿಂದ ಎದ್ದು ನಿಲ್ಲಲು ತ್ರಾಣವಿಲ್ಲದ ತಳಸಮುದಾಯಕ್ಕೆ ಆರ್ಥಿಕ ಚಿಕಿತ್ಸೆ– ನೀಡಬೇಕಾಗಿದೆ' ಎಂದು ಮಾತಾಡಿದ್ದೆ. ಆ ಸಂದರ್ಭದಲ್ಲೇ 'ದಲಿತರು ಸಂಘಟಿತರಾಗಬೇಕು, ತಮ್ಮ ಕೀಳರಿಮೆಯ ರೋಗದಿಂದ ಮೊದಲು ತಪ್ಪಿಸಿಕೊಂಡು, ಮೇಲರಿಮೆ ಹುಚ್ಚಿನ ಸಮುದಾಯದ ಏಟುಗಳಿಂದ ತಪ್ಪಿಸಿಕೊಳ್ಳುತ್ತಲೇ, ಆ ಮೇಲರಿಮೆಯ ಹುಚ್ಚಿಗೂ ಚಿಕಿತ್ಸೆ ಕೊಡಬೇಕು ಎಂದು ಹೇಳಿದ್ದೆ. ಅಂದರೆ ಒಂದು ಸಂಘಟನೆ ಹುಚ್ಚಾಸ್ಪತ್ರೆಯ ವೈದ್ಯರಂತೆ ಕಾರ್ಯನಿರ್ವಹಿಸಬೇಕು' ಎಂಬುದು ನನ್ನ ಆಶಯವಾಗಿತ್ತು. ಯಾವುದೇ ಜಾತಿ ಸಂಘಟಿತವಾಗುವುದು, ಜಾತಿ ಕಟ್ಟುಪಾಡು ತಾರತಮ್ಯಗಳನ್ನು ಬಿಗಿ ಮಾಡಿದರೆ, ಅದು ನಮ್ಮ ಸಂವಿಧಾನದ ಆಶಯಗಳಿಗೆ ಪೂರಕವಾಗಿರುವುದಿಲ್ಲ. ಆ ಜಾತಿಸಂಘಟನೆಯು ಜಾತಿಯ ಕಟ್ಟುಪಾಡು ತಾರತಮ್ಯಗಳನ್ನು ಸಡಿಲಗೊಳಿಸಿ ಮುಂದಕ್ಕೆಳೆಯುವುದಾದರೆ ಅದಕ್ಕೊಂದು ನೈತಿಕತೆ ಬಂದುಬಿಡುತ್ತದೆ.

ಈ 'ಜಾತಿ'ಯಿಂದ ನಾವು ಕಳೆದುಕೊಂಡದ್ದು ಏನೇನು? ಆಸ್ತಿ, ಅಂತಸ್ತು, ಸ್ಥಾನಮಾನ, ಅನುಕೂಲ ಇತ್ಯಾದಿಗಳನ್ನು ಬಿಟ್ಟೇ ಬಿಡೋಣ. ಒಬ್ಬ ವ್ಯಕ್ತಿ ತಾನು ಒಂದು ಜಾತಿಯಲ್ಲಿ ಹುಟ್ಟಿದ ಕಾರಣಕ್ಕಾಗಿ ತನ್ನ ನ್ಯಾಯಪರತೆಯನ್ನೇ, ಸತ್ಯಸಂಧತೆಯನ್ನೇ ಕಳೆದುಕೊಂಡು ಬಿಟ್ಟಿರುತ್ತಾನೆ. ಈ ಸಾಮಾಜಿಕ ಕಟ್ಟುಪಾಡುಗಳ ದೆಸೆಯಿಂದಾಗಿ ಅನ್ಯಾಯವೂ ಕೂಡಾ ಅನ್ಯಾಯವಾಗಿ ಕಾಣಲಾರದು. ಆತ ತನ್ನ ಅಂತಸಾಕ್ಷಿಯನ್ನೇ ಕುರುಡಾಗಿಸಿಕೊಂಡಿರುತ್ತಾನೆ. ತನ್ನದಲ್ಲದ ಜಾತಿ–ಮತಗಳ ಕಷ್ಟ ಸುಖ ಆತನಿಗೆ ಮುಟ್ಟುವುದೂ ಇಲ್ಲ. ಕೆಲವು ಸಲ ತನ್ನದಲ್ಲದ ಜಾತಿಯವನ ಸುಖ ಇವನಿಗೆ ಕಷ್ಟವಾಗಬಹುದು! ಅವನ ಕಷ್ಟ ಇವನಿಗೆ ಸುಖವಾಗಬಹುದು. ಒಟ್ಟಿನಲ್ಲಿ ಆತನ ಸಂವೇದನೆಗೆ ಕುಷ್ಠ ತಗುಲಿರುತ್ತದೆ, ಸ್ಪಂದನೆ ಇರುವುದಿಲ್ಲ. ಈ ಜಾತಿಯಿಂದ ನಾವು ಕಳೆದುಕೊಂಡದ್ದು ಏನೇನು? ಗಾಬರಿಯಾಗುತ್ತದೆ. ನಾವು ಕುಬ್ಜರೂ ರೋಗಿಗಳೂ ಆಗಿದ್ದೇವೆ. ಎಲ್ಲಾ ನಷ್ಟಕ್ಕಿಂತಲೂ ಇದು ನನಗೆ ದೊಡ್ಡ ನಷ್ಟವಾಗಿ ಕಾಣುತ್ತದೆ. ಹಾಗಾಗಿ ಜಾತಿಯಿಂದ ಬಿಡುಗಡೆ ಪಡೆಯುವುದು ಎಂದರೆ ಅದು ನಮ್ಮೊಳಗಿನ ನ್ಯಾಯಪರತೆ ಸತ್ಯಸಂಧತೆಯನ್ನು ಕಾಪಾಡಿಕೊಳ್ಳುವುದಕ್ಕಾಗಿ, ನಮ್ಮ ಸಂವೇದನೆಯನ್ನು ಉಳಿಸಿಕೊಳ್ಳುವುದಕ್ಕಾಗಿ, ನಾವು ಮನುಷ್ಯರಾಗಿ ಸ್ಪಂದಿಸಲು, ಎಂದರೆ ನಮ್ಮ ವಿಮೋಚನೆಗಾಗಿಯೇ ನಾವು ಜಾತ್ಯತೀತರಾಗಬೇಕಾಗಿದೆ. ಈ ಭಾವನೆಯನ್ನು ನಮ್ಮ ಎಳೆಯ ಮಕ್ಕಳಲ್ಲಿ ಬಿತ್ತಬೇಕಾಗಿದೆ. ಇದು ಶಿಕ್ಷಣದ ಭಾಗವಾಗಲೂ ಬೇಕಾಗಿದೆ.

ಜಾತಿ ಪದ್ಧತಿಯಿಂದ ಗಾಸಿಗೊಂಡು 'ಈ ಜಾತಿ ಅನ್ನೋದೇ ಇರಬಾರದು' ಎಂಬ ಸಂಕಟದ ಬದುಕಿನ ದಲಿತರನ್ನು ಎಚ್ಚರಿಸಬೇಕಾದರೂ ಅವರ 'ಜಾತಿ' ಯನ್ನೇ ಕೆರಳಿಸಿ ಅಷ್ಟೋ ಇಷ್ಟೋ ನಡೆಯುವಂತೆ ಮಾಡಬೇಕಾಗುತ್ತದೆ. ಇಲ್ಲಿ ತಳ ಸಮುದಾಯಗಳು ಎಚ್ಚರಗೊಂಡು ತಮಗೆ ಆದ ಅನ್ಯಾಯಕ್ಕೆ ಸೆಟೆದು ನಿಂತು ಕೂಗುವುದೂ ಕೂಡ ಬಿಗಿಯಾದ ಜಾತಿ ಕಟ್ಟುಪಾಡುಗಳನ್ನು ಅಳ್ಳಾಡಿಸಬಲ್ಲಷ್ಟು ಸಾಮರ್ಥ್ಯ ಪಡೆದಿರುತ್ತದೆ. ಹೀಗೆ ಗುರುತಿಸಿ ಎಚ್ಚರಗೊಳಿಸುವ ಐಡೆಂಟಿಟಿ, ಅಸ್ಮಿತೆ ಎನಿಸಿಕೊಳ್ಳುವ ಈ ಕ್ರಿಯೆ ಇಂದು ಹೆಚ್ಚು ಚರ್ಚೆಗೆ ಒಳಗಾಗುತ್ತಿದೆ. ಆದರೆ ನಾವು ಚರ್ಚಿಸಬೇಕಾಗಿರುವುದು ಯಾವುದೇ ಕ್ಷೇತ್ರದ ಈ ಗುರುತಿಸುವಿಕೆಯ ಐಡೆಂಟಿಟಿ ಎಷ್ಟಿರಬೇಕು ಮತ್ತು ಯಾಕಾಗಿ ಇರಬೇಕು ಎಂಬುದರ ಬಗ್ಗೆಯೂ ಇರಬೇಕಾಗುತ್ತದೆ. ಜಾತಿಯನ್ನು ಗುರುತಿಸಿ ಸಂಘಟಿತರಾಗಿ ಹೋರಾಡುತ್ತಲೇ ಅದರೊಳಗೇನೇ ಜಾತ್ಯತೀತತೆಯನ್ನು ಕಾಪಾಡಿಕೊಳ್ಳುವುದು ಹೇಗೆ ಎಂಬ ವಿವೇಕ, ಎಚ್ಚರ ಇಲ್ಲಿ ಬೇಕಾಗಿದೆ. ತಂತಿ ನಡಿಗೆಯಂತೆ ಇದು. ಯಾವುದೇ ಐಡೆಂಟಿಟಿ ಸಂಘಟನೆ ಯಾಕಾಗಿ? ಅದು ಸಮಾನತೆಗಾಗಿ, ವಿಕೇಂದ್ರೀಕರಣಕ್ಕಾಗಿ, ತಾರತಮ್ಯ ನಿವಾರಣೆಗಾಗಿ. ಈ ದಿಕ್ಕಲ್ಲಿ ಹೆಜ್ಜೆ ಇಡುವ ನಡಿಗೆಗಳಾಗಬೇಕು. ಯಾವುದೇ ಐಡೆಂಟಿಟಿ ನಡಿಗೆ, ತಾನೊಂದು ಅಸಮಾನತೆಗೆ ಒಳಗಾದ ಝರಿ, ತಾನು ಇರುವುದೇ ಸಮಾನತೆಯ ನದಿಗೆ ಕೂಡುವುದಕ್ಕಾಗಿ ಎಂಬಂತೆ...ತನ್ನ ಆಶಯಗಳ ಇತರ ಝರಿಗಳ ಜೊತೆ ಕೂಡಿಕೊಳ್ಳುತ್ತಾ ಸಮಾನತೆಯ ನದಿಯ ಕಡೆ ಚಲಿಸಬೇಕಾಗುತ್ತದೆ. ಇಲ್ಲದಿದ್ದರೆ ಮತ್ತೆಲ್ಲಿಗೋ ತಲುಪಿಬಿಡಬಹುದು ಅಥವಾ ತಾನೇ ಸರ್ವಸ್ವ ಎಂದುಕೊಂಡು ಅತಿಗೆ ಹೋಗಿ ದಿಕ್ಕು ತಪ್ಪಲೂಬಹುದು. ಐಡೆಂಟಿಟಿಯ ಇಂಥ ಆಂದೋಲನಗಳಿಗೆ ಅಂದರೆ –ಆದಿವಾಸಿ, ಮಹಿಳೆ, ದಲಿತ ಒಳಪಂಗಡಗಳು, ಅಲ್ಪಸಂಖ್ಯಾತ, ತಳ ಸಮುದಾಯ, ರೈತಾಪಿ ಹೋರಾಟಕ್ಕೆ ಈ ಅರಿವಿಲ್ಲದಿದ್ದರೆ ಅದು ಏಕತೆಗೆ ಬದಲು ಛಿದ್ರತೆಗೆ ತಾನೂ ಕಾರಣವಾಗಬಹುದು. ಸಮಾನತೆಯ ಆಶಯದ ಸಂಘಟನೆಗಳು ಈ ಅರಿವಲ್ಲಿ ನಡೆಯಬೇಕಾಗಿರುವುದು ಇಂದಿನ ಅಗತ್ಯವಾಗಿದೆ.

ಇಂದಿನ ತುರ್ತು ಅಗತ್ಯವಾಗಿದೆ, ಯಾಕೆಂದರೆ ಭಾರತ ಧಾವಿಸುತ್ತಿರುವ ದಿಕ್ಕು, ವೇಗ ನೋಡಿದರೆ– ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟವರ ಕನಸು ಇಂದು ಅಪಹಾಸ್ಯಕ್ಕೆ ವಸ್ತುವಾಗಿದೆ. ಸಮಾನತೆ ಅಂದರೆ ಇಂದು ನಗುತ್ತಾರೆ. ಬಡವ ಬಲ್ಲಿದರ ನಡುವೆ ಅಂತರ ಕಮ್ಮಿ ಇರಬೇಕು ಅಂದರೆ ಇನ್ನೂ ನಗುತ್ತಾರೆ. ಹಾಗಾದರೆ ನಮಗೆ ಯಾವ ಭಾರತ ಬೇಕು? ಮುಂಬೈನಲ್ಲಿ ಮುಖೇಶ್ ಅಂಬಾನಿಯವರ ಮನೆ 27 ಅಂತಸ್ತು, ಮೂರು ಹೆಲಿಪ್ಯಾಡ್, ಒಂಬತ್ತು ಲಿಫ್ಟ್, ತೂಗು ತೋಟಗಳು, ಬಾತ್‌ರೂಮುಗಳು, ಜಿಮ್‌ಗಳು, ಆರು ಅಂತಸ್ತಿನ ಪಾರ್ಕಿಂಗು, 600 ಸೇವಕರು ಇತ್ಯಾದಿ ಇರುವ ಈ ಮನೆಯ ಸುತ್ತ ಸಾವಿರಾರು ಸ್ಲಂ ಜೋಪಡಿಗಳು. ಇದು ಭಾರತವಾಗಬೇಕೆ? ನಮ್ಮ ಬಳ್ಳಾರಿಗೆ ಬಂದರೆ ಸಾರ್ವಜನಿಕ ಆಸ್ತಿಯಾಗಬೇಕಾದ ಸಂಪತ್ತನ್ನು ಕೆಲವೇ ವ್ಯಕ್ತಿಗಳು ಡಕಾಯಿತಿಸಿ ಅದಿರು ತೋಡಿ ತೆಂಗಿನ ಮರದುದ್ದದ ಹಳ್ಳಗಳು, ಗಾಳಿ ನೀರೂ ಕೆಂಪು ಕೆಂಪು– ಇದು ಭಾರತವಾಗಬೇಕೆ? 120 ಕೋಟಿ ಜನಸಂಖ್ಯೆಯ ಭಾರತದಲ್ಲಿ ಕೇವಲ 100 ಜನ ಶ್ರೀಮಂತರು ಒಟ್ಟು ರಾಷ್ಟ್ರೀಯ ಉತ್ಪನ್ನದ ಕಾಲು ಭಾಗದ ಒಡೆಯರಾಗಿದ್ದಾರೆ! ಇದು ಎಲ್ಲಿಗೆ ಕೊಂಡೊಯ್ಯುತ್ತದೆ? ಇದು ಶ್ರೀಮಂತಿಕೆ ಐಷಾರಾಮಿಗೆ ಮಾತ್ರ ನಿಲ್ಲುವುದಿಲ್ಲ. ಮಿತಿಮೀರಿ ಕುಣಿದಾಡುವ ಆ ದುಡ್ಡು ಎಲ್ಲವನ್ನೂ ಕೊಂಡುಕೊಳ್ಳುತ್ತ ಎಲ್ಲವನ್ನು ಹರಾಜಿಗೆ ಹಾಕುತ್ತದೆ. ಯಾರನ್ನೂ ಬಿಡುವುದಿಲ್ಲ– ಜನಪ್ರತಿನಿಧಿಗಳನ್ನು, ಶಾಸಕರನ್ನು, ಸಂಸದರನ್ನು, ಸಚಿವರನ್ನು ಅಷ್ಟೇ ಸಾಲದು ಎಂಬಂತೆ ಜನತಂತ್ರ ವ್ಯವಸ್ಥೆಯನ್ನೂ ಬುಡಮೇಲು ಮಾಡಿ ನ್ಯಾಯಾಂಗ ಕಾರ್ಯಾಂಗ ಪತ್ರಿಕಾರಂಗಕ್ಕೂ ಕೈಚಾಚುತ್ತದೆ. ಭಾರತಕ್ಕೆ ಸ್ವಾತಂತ್ರ ಕೊಡುವ ಸಮಯದಲ್ಲಿ ಚರ್ಚಿಲ್ ಆಡಿದ ಮಾತು ಉತ್ಪ್ರೇಕ್ಷೆಯಲ್ಲವೇನೋ ಎಂದು ಭಯವಾಗುತ್ತದೆ. ಖಾಸಗಿ, ಕಾರ್ಪೊರೇಟ್ ಒಡೆತನದ ಸಂಪತ್ತಿಗೆ ಒಂದು ಹಂತ ನಿಗದಿಪಡಿಸಿ ಅದಾದ ಮೇಲೆ ಮಿತಿಮೀರಿದ ಆ ಸಂಪತ್ತು ಸಾರ್ವಜನಿಕ ಆಸ್ತಿಯಾಗಬೇಕು, ಆ ಸಂಪತ್ತು ಉಂಟಾಗಲು ಅದು ಬಳಸಿಕೊಂಡ ಗಾಳಿ ನೀರು ಬೆಳಕಿಗೆ ಅಂದರೆ ನಾಡಿಗೆ ಸಲ್ಲುವಂತಹ ಏನೋ ಒಂದು ಉಳಿಗಾಲದ ವ್ಯವಸ್ಥೆಯನ್ನು ಕಂಡುಕೊಳ್ಳಬೇಕಾಗಿದೆ. ಇಂದು ನಗರಗಳು ಉಸಿರಾಡಲು ಕಷ್ಟಪಡುತ್ತಿವೆ, ಹಳ್ಳಿಗಳು ತ್ರಾಣವಿಲ್ಲದೆ ನಡೆಯಲು ಕಷ್ಟಪಡುತ್ತಿವೆ, ಅನ್ನ ಕೊಡುವವನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಈಗ ಉಳಿಯಲು ಎಲ್ಲರಿಗೂ ದಾರಿ ಒಂದೇ. ಇಲ್ಲಿ ಮತ್ತೆ ಸಮಾನತೆ ಕನಸನ್ನು ಬಿತ್ತಬೇಕಾಗಿದೆ. ಬಡವ ಬಲ್ಲಿದರ ನಡುವಿನ ಅಂತರ ಕಮ್ಮಿ ಇರಬೇಕು ಎಂಬ ಆಸೆಗೆ ಮತ್ತೆ ನೀರೆರೆಯಬೇಕಾಗಿದೆ. ವಿಕೇಂದ್ರೀಕರಣ, ಎಲ್ಲರಿಗೂ ಉದ್ಯೋಗ, ಸ್ವಾವಲಂಬನೆ ಎಂಬ ಹುದುಗಿಹೋಗಿರುವ ಈ ಹಳೆ ಮಾತುಗಳನ್ನು ಮತ್ತೆ ಮತ್ತೆ ಹೇಳಬೇಕಾಗಿದೆ. ಈ ಹಳೇ ಮಾತುಗಳನ್ನು ಎಳೆ ಮಕ್ಕಳು ಹೇಳುವಂತಾದರೆ ಆ ಮಾತುಗಳಲ್ಲಿ ಜೀವಸಂಚಾರ ಉಂಟಾಗಬಹುದು. ಮೊದಲು, ಆ ಮಕ್ಕಳ ಶಿಕ್ಷಣದಲ್ಲಿ ಭಿನ್ನಭೇದ ತೊಡೆದು ಸಮಾನ ಶಿಕ್ಷಣ ಪದ್ಧತಿಯ ಮೂಲಕ ಸಂವಿಧಾನದ ಆಶಯಗಳಿಗೆ ತಕ್ಕಂತೆ ಪಠ್ಯ ರಚಿಸಿ ನಾಳಿನ ಭಾರತ ಕಟ್ಟಬೇಕಾಗಿದೆ.

# ಸಾಮಾಜಿಕ ನ್ಯಾಯ ಮರೀಚಿಕೆ

ಕೃಷಿ, ಶಿಕ್ಷಣ, ಕಂದಾಯ, ಸಾರಿಗೆ, ನಗರಾಭಿವೃದ್ಧಿ, ತೋಟಗಾರಿಕೆ, ಅರಣ್ಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಸತಿ, ಲೋಕೋಪಯೋಗಿ, ನೀರಾವರಿ, ಆರೋಗ್ಯ, ಪ್ರವಾಸೋದ್ಯಮ ಸೇರಿದಂತೆ 28ರಿಂದ 35 ಇಲಾಖೆಗಳಿಗೆ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನ ಹಂಚಿಕೆ ಮಾಡಲಾಗುತ್ತದೆ. ಹೆಚ್ಚಿನ ಮೊತ್ತ ಆಯಾ ಇಲಾಖೆಗಳ ಮೂಲಕವೇ ವೆಚ್ಚವಾಗುತ್ತದೆ. ಒಂದಷ್ಟು ಮೊತ್ತ 'ಕ್ರೋಢೀಕೃತ ಅನುದಾನ'ದ ರೂಪದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಕೈಸೇರುತ್ತದೆ. ಸಮಾಜ ಕಲ್ಯಾಣ ಇಲಾಖೆಯ ಕೈಸೇರುವ ಹೆಚ್ಚಿನ ಮೊತ್ತ, ಅದರ ಅಧೀನದಲ್ಲಿರುವ 270 ಶಾಲೆಗಳು, ವಸತಿ ಶಾಲೆಗಳ ನಿರ್ವಹಣೆಗಾಗಿಯೇ ವೆಚ್ಚವಾಗುತ್ತದೆ. ಒಂದಷ್ಟು ಮೊತ್ತ 'ಅಂಬೇಡ್ಕರ್ ಅಭಿವೃದ್ಧಿ ನಿಗಮ'ಕ್ಕೆ ವರ್ಗಾವಣೆಯಾಗುತ್ತದೆ.

ಆರೇ ವರ್ಷಗಳ ಅವಧಿಯಲ್ಲಿ ಬಿಡುಗಡೆ ಆದ 20 ಸಾವಿರ ಕೋಟಿ ರೂಪಾಯಿ ಸಂಪೂರ್ಣವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನು ನೇರವಾಗಿ ತಲುಪಿದೆಯೇ? ಎಂಬ ಪ್ರಶ್ನೆಯನ್ನು ಸಮಾಜ ಕಲ್ಯಾಣ ಇಲಾಖೆಯ ಮುಂದಿಟ್ಟರೆ ನಿಖರವಾದ ಉತ್ತರ ದೊರೆಯದು. ಇಲಾಖೆಯ ಬೆರಳು ನಿಧಾನಕ್ಕೆ ಈ ಯೋಜನೆಯ ವ್ಯಾಪ್ತಿಯಲ್ಲಿರುವ ಬೇರೆ ಇಲಾಖೆಗಳತ್ತ ಹೊರಳುತ್ತದೆ.

**ರಾಜ್ಯದಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳ ವಿವರ**

| | |
|---|---|
| **ಮಂಜೂರಾದ ಹುದ್ದೆಗಳು** | |
| ಪರಿಶಿಷ್ಟ ಜಾತಿ | 14,624 |
| ಪರಿಶಿಷ್ಟ ಪಂಗಡ | 4,491 |
| ಒಟ್ಟು | 19,115 |
| **ತುಂಬಿರುವ ಹುದ್ದೆಗಳು** | |
| ಪರಿಶಿಷ್ಟ ಜಾತಿ | 11,853 |
| ಪರಿಶಿಷ್ಟ ಪಂಗಡ | 3,391 |
| ಒಟ್ಟು | 15,194 |
| **ಖಾಲಿ ಇರುವ ಹುದ್ದೆಗಳು** | |
| ಪರಿಶಿಷ್ಟ ಜಾತಿ | 2,771 |
| ಪರಿಶಿಷ್ಟ ಪಂಗಡ | 1,150 |
| ಒಟ್ಟು | 3,921 |

ಆಯಾ ಇಲಾಖೆಗಳೇ ತಮ್ಮ ವ್ಯಾಪ್ತಿಯಲ್ಲಿ ನಿಗದಿತ ಮೊತ್ತವನ್ನು ವೆಚ್ಚ ಮಾಡುತ್ತವೆ ಎಂಬ ಉತ್ತರ ದೊರೆಯುತ್ತದೆ.

ಆದರೆ, ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆಯ ಅನುದಾನ ಎಲ್ಲಿಗೆ ಹರಿಯುತ್ತಿದೆ ಎಂಬ ನಿಖರ ಮಾಹಿತಿ ಆ ಸಮುದಾಯದ ಬಹುತೇಕ ಚುನಾಯಿತ ಜನಪ್ರತಿನಿಧಿಗಳು, ದಲಿತ ಸಂಘಟನೆಗಳಿಗೂ ಗೊತ್ತಿಲ್ಲ. ಕೆಲವರಿಗಷ್ಟೇ ಇದರ ಸಣ್ಣ ಸುಳಿವು ಇದೆಯಾದರೂ, ಇನ್ನೂ ಎಲ್ಲವನ್ನೂ ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುತ್ತಿಲ್ಲ.

'ಬರಿ ಮಾತು; ಕೃತಿಯಲ್ಲ': ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುಷ್ಠಾನದ ಕುರಿತು ಹೆಚ್ಚು ಆಸಕ್ತಿ ತಳೆದಿರುವವರಲ್ಲಿ ಚಾಮರಾಜನಗರ ಸಂಸದ ಆರ್ .ಧ್ರುವನಾರಾಯಣ್ ಒಬ್ಬರು. ಅವರ ಪ್ರಕಾರ, ಈ ಉಪ ಯೋಜನೆಗಳ ಅಡಿ ನಿಗದಿತ ಅನುದಾನ ಪಡೆದ ಇಲಾಖೆಗಳು ತಮ್ಮ ಮುಖ್ಯ ಯೋಜನೆಗಳಿಗೆ ಅದನ್ನು ಬಳಸಿಕೊಂಡಿದ್ದೇ ಹೆಚ್ಚು. ದಲಿತರೂ ಆ ಯೋಜನೆಗಳ ಅನುಕೂಲ ಪಡೆಯುತ್ತಾರೆ ಎಂಬ ಕಾರಣ ನೀಡಿ ಉಸ್ತುವಾರಿ ಸಮಿತಿಯ ಒಪ್ಪಿಗೆ ಪಡೆಯಲಾಗುತ್ತದೆ. ಇದರಿಂದಾಗಿ ಜನಸಂಖ್ಯೆ ಆಧಾರಿತ ಅನುದಾನ ನಿಗದಿ ಕೇವಲ ದಾಖಲೆಗಳಲ್ಲಷ್ಟೇ ಉಳಿದಿದೆ.

'ಪ್ರಜಾವಾಣಿ' ಜೊತೆ ಮಾತನಾಡಿದ ಅವರು, 'ಕೆಲವು ಇಲಾಖೆಗಳಿಗೆ ಉಪ ಯೋಜನೆಗಳಿಗೆ ಮೀಸಲಾದ ಅನುದಾನದ ಬಳಕೆಯ ಬಗ್ಗೆಯೇ ಆಸಕ್ತಿ ಇಲ್ಲ. ನಾನು ಶಾಸಕನಾಗಿದ್ದ ಅವಧಿಯಲ್ಲಿ ವಿಧಾನಸಭೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮಿತಿ ಇದೇ ವಿಷಯದ ಬಗ್ಗೆ ಪರಿಶೀಲನೆ ನಡೆಸಿತ್ತು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ 340 ಕೋಟಿ ರೂಪಾಯಿ ಎಸ್‌ಸಿಎಸ್‌ಪಿ ಅನುದಾನ ಬಳಕೆಯಾಗದೇ ಉಳಿದಿತ್ತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ರೂ 560 ಕೋಟಿ ಹಾಗೆಯೇ ಇತ್ತು. ಈ ಮೊತ್ತವನ್ನು ಹೇಗೆ ಬಳಕೆ ಮಾಡಬೇಕು ಎಂಬುದು ಗೊತ್ತಾಗದೇ ಬಾಕಿ ಇರಿಸಿರುವುದಾಗಿ ಅಧಿಕಾರಿಗಳು ತಿಳಿಸಿದ್ದರು. ಆದರೆ, ಎರಡೂ ಸಂಸ್ಥೆಗಳ ವ್ಯಾಪ್ತಿಯಲ್ಲಿ ದಲಿತರಿಗಾಗಿ ಮಾಡಬಹುದಾದ ಕೆಲಸಗಳು ಸಾಕಷ್ಟು ಇದ್ದವು' ಎಂದು ವಿವರಿಸಿದರು.

ಲೋಕೋಪಯೋಗಿ ಇಲಾಖೆ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನವನ್ನು ಮುಖ್ಯ ರಸ್ತೆಗಳ ಅಭಿವೃದ್ಧಿಗಾಗಿಯೇ ಬಳಸಿಕೊಳ್ಳುತ್ತಿತ್ತು. 2009ರಲ್ಲಿ ವಿಧಾನಸಭೆಯ ಸಮಿತಿಯ ಪರಿಶೀಲನೆ ವೇಳೆ ಆಕ್ಷೇಪ ಎತ್ತಿದ ಬಳಿಕ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನವಸತಿ ಪ್ರದೇಶಗಳನ್ನು ನೇರವಾಗಿ ಸಂಪರ್ಕಿಸುವ ರಸ್ತೆಗಳ ಅಭಿವೃದ್ಧಿಗೆ ಅನುದಾನ ನೀಡಲಾಗುತ್ತಿದೆ. ಇಂತಹ ಬದಲಾವಣೆಗಳು ಆಗದ ಹೊರತೂ 'ಜನಸಂಖ್ಯೆಯ ಪ್ರಮಾಣಕ್ಕೆ ಸಮನಾದ ಅನುದಾನ' ಎಂಬ ಘೋಷಣೆಗೆ ಅರ್ಥವೇ ಬರುವುದಿಲ್ಲ ಎನ್ನುತ್ತಾರೆ ಅವರು.

ಮಳವಳ್ಳಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಪ್ರಕಾರ, 'ಎರಡೂ ಉಪ ಯೋಜನೆಗಳಿಗೆ ಒದಗಿಸಿದ ಪೂರ್ಣ ಮೊತ್ತ ಸದ್ಬಳಕೆ ಆಗಿದ್ದರೆ ದಲಿತರಲ್ಲಿ ಬಡತನ ನಿವಾರಣೆ ಆಗಿರುತ್ತಿತ್ತು. ಆದರೆ, ದಲಿತರ ಕಲ್ಯಾಣಕ್ಕೆ ಹಣ ವೆಚ್ಚ ಮಾಡಬೇಕಾದ ಹೊಣೆ ಇರುವ ಇಲಾಖೆಗಳು ಏನು ಮಾಡುತ್ತವೆ ಎಂಬುದು ಯಾರಿಗೂ ತಿಳಿಯುವುದಿಲ್ಲ. ಉಪ ಯೋಜನೆಗಳ ಅನುಷ್ಠಾನದಲ್ಲಿ ಪಾರದರ್ಶಕತೆ ಬರುವವರೆಗೂ ಈ ಸಮಸ್ಯೆಗಳಿಗೆ ಪರಿಹಾರ ದೊರೆಯದು' ಎನ್ನುತ್ತಾರೆ.

# ಎಸ್ಸೆಸ್ಸೆಲ್ಸಿ ಪರೀಕ್ಷೆ: 12 ಡಿಬಾರ್

**ಪ್ರಜಾವಾಣಿ ವಾರ್ತೆ**

ಬೆಂಗಳೂರು: ರಾಜ್ಯದಲ್ಲಿ ಶುಕ್ರವಾರ ನಡೆದ ಎಸ್ಸೆಸ್ಸೆಲ್ಸಿ ತೃತೀಯ ಭಾಷಾ ವಿಷಯದ ಪರೀಕ್ಷೆಯಲ್ಲಿ ನಕಲು ಮಾಡಿದ 12 ವಿದ್ಯಾರ್ಥಿಗಳನ್ನು ಡಿಬಾರ್ ಮಾಡಲಾಗಿದೆ. ಗುಲ್ಬರ್ಗದಲ್ಲಿ 6, ಕೋಲಾರದಲ್ಲಿ 3, ರಾಯಚೂರು, ವಿಜಾಪುರ ಮತ್ತು ಬಾಗಲಕೋಟೆಯಲ್ಲಿ ತಲಾ ಒಬ್ಬರನ್ನು ಡಿಬಾರ್ ಮಾಡಲಾಗಿದೆ. ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಉರ್ದು, ಸಂಸ್ಕೃತ, ಕೊಂಕಣಿ, ಪರ್ಷಿಯನ್ ಭಾಷಾ ಪರೀಕ್ಷೆ ಶುಕ್ರವಾರ ನಡೆಯಿತು.

## ನಿವೃತ್ತ ಉಪ ಲೋಕಾಯುಕ್ತ ಚಂದ್ರಶೇಖರಯ್ಯ ಪ್ರಕರಣ

# ಹೈಕೋರ್ಟ್ ನಿಯಮಾವಳಿ: 'ಸುಪ್ರೀಂ'ನಲ್ಲಿ ಸ್ಪಷ್ಟನೆ

**ಪ್ರಜಾವಾಣಿ ವಾರ್ತೆ**

ಬೆಂಗಳೂರು:ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರಯ್ಯ ಅವರನ್ನು ಉಪ ಲೋಕಾಯುಕ್ತರನ್ನಾಗಿ ನೇಮಕ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಸೂಚಿಸಿರುವ ನಿಯಮಾವಳಿಗಳ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ಸ್ಪಷ್ಟನೆ ಕೋರಲಾಗುವುದು ಎಂದು ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ ತಿಳಿಸಿದರು.

ಗೃಹ ಕಚೇರಿ 'ಕೃಷ್ಣಾ'ದಲ್ಲಿ ಶುಕ್ರವಾರ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, 'ಸುಪ್ರೀಂ ಕೋರ್ಟ್‌ನಿಂದ ಸ್ಪಷ್ಟನೆ ದೊರೆತ ನಂತರವೇ ನೂತನ ಉಪ ಲೋಕಾಯುಕ್ತರ ನೇಮಕ ಸಂಬಂಧ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದರು.

ಪ್ರಧಾನಿ ಇದೇ 16ರಂದು ಆಯೋಜಿಸಿರುವ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯಲ್ಲಿ ಪಾಲ್ಗೊಳ್ಳಬೇಕಿರುವ ಕಾರಣ, ಬರಪೀಡಿತ ಪ್ರದೇಶಗಳಲ್ಲಿ ಅಂದು ಪ್ರವಾಸ ಕೈಗೊಳ್ಳುತ್ತಿಲ್ಲ. ಆದರೆ 17 ಮತ್ತು 18ರಂದು ವಿಜಾಪುರ, ಬೀದರ ಅಥವಾ ಗುಲ್ಬರ್ಗ ಜಿಲ್ಲೆಗಳಲ್ಲಿ ಪ್ರವಾಸ ಮಾಡುವುದಾಗಿ ತಿಳಿಸಿದರು.

ಜನರ ಸಮಸ್ಯೆಗಳಿಗೆ ಸ್ಪಂದಿಸಬಲ್ಲ, ಟೀಕೆ–ಟಿಪ್ಪಣಿಗಳನ್ನು ಸಲಹೆಯ ರೂಪದಲ್ಲಿ ಸ್ವೀಕರಿಸಬಲ್ಲ ವ್ಯಕ್ತಿಯೊಬ್ಬರನ್ನು ಬೆಂಗಳೂರು ಮೇಯರ್ ಸ್ಥಾನಕ್ಕೆ ಆಯ್ಕೆ ಮಾಡಲಾಗುವುದು ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರ ನೀಡಿದರು.

ಕಾವೇರಿ ವಿವಾದ, ಬರ ಸೇರಿದಂತೆ ಇತರ ವಿಷಯಗಳ ಕುರಿತು ಚರ್ಚಿಸಲು ಇದೇ 19ರಂದು ಸರ್ವಪಕ್ಷಗಳ ಸಭೆ ಕರೆಯಲಾಗಿದೆ. ಅನಂತರ ನವದೆಹಲಿಗೆ ಸರ್ವಪಕ್ಷಗಳ ನಿಯೋಗ ಕೊಂಡೊಯ್ಯಲಾಗುವುದು ಎಂದರು.


## ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹಾವೇರಿ

ಸಂಖ್ಯೆ: ಕೃಉಮಾಸ(ಹಾ)/22/2011-12 ದಿನಾಂಕ : 12.04.2012

**ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ**

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹಾವೇರಿ ವತಿಯಿಂದ 2009–10 ಮತ್ತು 2011–12ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅನುಮೋದನೆಗೊಂಡ ಹಾಗೂ ವಿಶೇಷ ಅನುಮೋದನೆ ಪಡೆದ ಅಭಿವೃದ್ಧಿ ಕಾಮಗಾರಿಗಳ ಪ್ಯಾಕೇಜ್ (ಟೆಂಡರ್ ಮೊತ್ತ ರೂ.46,08,851.70 ಮತ್ತು ಇ.ಎಂ.ಡಿ. ರೂ.92,180.00) ಕುರಿತು ಹೆಚ್.ಪಿ. ಸರ್ವೀಸ್, ಬೆಂಗಳೂರು ರವರಲ್ಲಿ ಯೂಸರ್ ಐ.ಡಿ., ಪಾಸ್‌ವರ್ಡ್ (User ID, Password) ಪಡೆದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಒಂದನೇ ದರ್ಜೆಯ ವಿದ್ಯುತ್ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ವೆಬ್‌ಸೈಟ್ **http://eproc.karnataka.gov.in**ನಲ್ಲಿ ಸ್ಪರ್ಧಾತ್ಮಕ ದರವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ದಿನಾಂಕ : **08.05.2012 ಸಂಜೆ 4.30 ಗಂಟೆಯವರೆಗೆ.** ಟೆಂಡರ್ ತೆರೆಯುವ ದಿನಾಂಕ : **10.05.2012 ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳನ್ನು, ಹೆಚ್ಚಿನ ಮಾಹಿತಿ ಮತ್ತು ಷರತ್ತು ನಿಬಂಧನೆಗಳಿಗೆ ವೆಬ್‌ಸೈಟ್ ಮತ್ತು ಸಹಾಯವಾಣಿ : 080–22485867 ಮತ್ತು 08375–234625ನ್ನು ಸಂಪರ್ಕಿಸುವುದು.

ಸಹಿ/- (ಕೆ.ಟಿ. ಓಬಪ್ಪ)
ಕಾರ್ಯದರ್ಶಿ
ಕೃಉಮಾಸ, ಹಾವೇರಿ

ಸಹಿ/- (ನಾಗರಾಜ ಕೊ. ಬಸೇಗೆಣ್ಣಿ)
ಪ್ರಭಾರ ಅಧ್ಯಕ್ಷರು
ಕೃಉಮಾಸ, ಹಾವೇರಿ

ಕರ್ನಾಟಕ ಸರ್ಕಾರ
## ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆ)
ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು - 560 002. ದೂ: 080-26700810,
ಟೆಲಿಫ್ಯಾಕ್ಸ್: 080-26704342 ಇಮೇಲ್: director_bmcri@yahoo.co.in

ಸಂಖ್ಯೆ: ಬೆಂವೈವಿ/ಸರಬ(1)/03/2012-13 ದಿನಾಂಕ: 13-04-2012

**ಮರು ಅಲ್ಪಾವಧಿ ಇ-ಟೆಂಡರ್ ಅಧಿಸೂಚನೆ**

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಹಾಗೂ ಈ ಸಂಸ್ಥೆಗೆ ಹೊಂದಿಕೊಂಡಿರುವ **ಬೋಧಕ ಆಸ್ಪತ್ರೆಗಳ ವಿವಿಧ ವಿಭಾಗಗಳಿಗೆ ವೈದ್ಯಕೀಯ ಉಪಕರಣಗಳು, ಆಸ್ಪತ್ರೆಯ ಪೀಠೋಪಕರಣ ಮತ್ತು X-Ray Films** ಖರೀದಿಗಾಗಿ ಹಾಗೂ ಕಾಲೇಜು ಮತ್ತು ವಾಣಿ ವಿಲಾಸ್ ಆಸ್ಪತ್ರೆಗೆ ಸ್ವಚ್ಛತಾ ಭದ್ರತಾ ಸೇವೆಗಳನ್ನು ನಿರ್ವಹಿಸುವುದಕ್ಕಾಗಿ ಮರು ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂ, ಉಪಕರಣಗಳ ಪಟ್ಟಿ, ಇ.ಎಂ.ಡಿ. ವಿವರ ಮತ್ತು ಷರತ್ತು ಮುಂತಾದ ವಿವರಗಳನ್ನು **https://www.eproc.karnataka.gov.in** ಈ ವೆಬ್‌ಸೈಟಿನಲ್ಲಿ ವೀಕ್ಷಿಸಿ, ಟೆಂಡರುಗಳನ್ನು ಸಲ್ಲಿಸಬಹುದು. ಆಸಕ್ತಿಯುಳ್ಳ ಟೆಂಡರುದಾರರು **e-procurement portal** ನಲ್ಲಿ ನೊಂದಾಯಿಸತಕ್ಕದ್ದು. ನೋಂದಾವಣೆಗೆ ಅಗತ್ಯವಾದ ವಿವರಗಳನ್ನು ವೆಬ್‌ಸೈಟಿನಲ್ಲಿ ನೋಡಬಹುದು.
(1) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ: **16.04.2012.** (2) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ : **30.04.2012 ಅಪರಾಹ್ನ 4.30 ಕ್ಕಿಂತಲೂ ಮುಂಚಿತವಾಗಿ.** (3) ಟೆಂಡರ್‌ಗಳನ್ನು ತೆರೆಯುವ ದಿನಾಂಕ: **03.05.2012ರ ಪೂರ್ವಾಹ್ನ10.30ಕ್ಕೆ.**
ಹೆಚ್ಚಿನ ವಿವರಗಳಿಗಾಗಿ ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರನ್ನು ಸಂಪರ್ಕಿಸಬಹುದು.
ಸಹಿ/– ನಿರ್ದೇಶಕರು ಹಾಗೂ ಡೀನ್

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಎಸ್‌ಡಬ್ಲ್ಯುಡಿ (ಪೂರ್ವ), ಬಿಬಿಎಂಪಿ, ಹೊಸ ಕಟ್ಟಡ, ಎನ್.ಆರ್. ಸ್ಕ್ವೇರ್, ಬೆಂಗಳೂರು - 560 002

ಸಂಖ್ಯೆ:ಕಾಪಾಅ/ಎಸ್‌ಡಬ್ಲ್ಯುಡಿ(ಪೂರ್ವ)/ಟೆಂಡರ್/758/2012-13 ದಿನಾಂಕ: 12-04-2012

**ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ**
(ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯುಡಿ (ಪೂರ್ವ), ಬಿಬಿಎಂಪಿ, ಬೆಂಗಳೂರು ಇವರು ಆಯುಕ್ತರು, ಬಿಬಿಎಂಪಿ ಇವರ ಪರವಾಗಿ ಬೃಬೆಂಮಪಾ / ಕೆಪಿಡಬ್ಲ್ಯುಡಿ / ಸಿಪಿಡಬ್ಲ್ಯುಡಿ / ರೈಲ್ವೇಸ್/ ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತ 1, 2ನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕ್ರ. ಸಂ. | ಕಾಮಗಾರಿಯ ಹೆಸರು | ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) | ಇಎಂಡಿ (ರೂ.ಗಳಲ್ಲಿ) |
|---|---|---|---|
| 1 | **ವಾರ್ಡ್ ನಂ. 57,** ಸಿ.ವಿ.ರಾಮನ್ ನಗರದಲ್ಲಿ ವೇಮಣ್ಣ ರಸ್ತೆಯಲ್ಲಿ ಸೂಪರ್ ಮಾರ್ಕೆಟ್‌ವರೆಗೆ ಎಸ್‌ಡಬ್ಲ್ಯುಡಿಗಾಗಿ ಆರ್‌ಸಿಸಿ ಬಾಕ್ಸ್ ಚರಂಡಿಯ ಮರುನಿರ್ಮಾಣ. | 173.23 | 2,60,000/- |
| 2 | **ವಾರ್ಡ್ ನಂ. 60ರ** ಚಲ್ಲಘಟ್ಟ ವ್ಯಾಲಿ ಸಿ–203 ಸೆಕೆಂಡರಿ ಚರಂಡಿಯಲ್ಲಿ ಟ್ಯಾನರಿ ರಸ್ತೆಯ (ಕುರಿದೊಡ್ಡಿ) ಸಮನಾಂತರ ರಸ್ತೆಯಲ್ಲಿ ಯು–ಆಕಾರದ ಆರ್‌ಸಿಸಿ ಚರಂಡಿಯ ನಿರ್ಮಾಣ. | 119.75 | 2,00,000/- |
| 3 | **ವಾರ್ಡ್ ನಂ. 57ರ** ಕಗ್ಗದಾಸಪುರ ಕೆರೆಯಿಂದ ವೇಮನ ರಸ್ತೆಯವರೆಗೆ ಎಪಿಟೋಮಾ ಅಪಾರ್ಟ್‌ಮೆಂಟ್ಸ್ ಎದುರು ಆರ್‌ಸಿಸಿ ರೀಟೈನಿಂಗ್ ಗೋಡೆಯ ನಿರ್ಮಾಣ ಮತ್ತು ಕಳೆದುಹೋದ ಬಿಟ್‌ಗಳಿಗಾಗಿ ಎಸ್‌ಡಬ್ಲ್ಯುಡಿಯ ಮೇಲೆ ಚೈನ್‌ಲಿಂಕ್ ತಂತಿಬೇಲಿ ಒದಗಿಸುವುದು. | 187.37 | 2,81,100/- |
| 4 | **ವಾರ್ಡ್ ನಂ. 57,** ಸಿ.ವಿ. ರಾಮನ್ ನಗರದಲ್ಲಿರುವ ಸೂಪರ್ ಮಾರ್ಕೆಟ್‌ನಿಂದ ಕಗ್ಗದಾಸಪುರ ಮುಖ್ಯ ರಸ್ತೆಯವರೆಗೆ ಎಸ್‌ಡಬ್ಲ್ಯುಡಿಯ ಮರುನಿರ್ಮಾಣ. | 47.70 | 95,400/- |
| 5 | ಬೆಂಗಳೂರು, ಕೆ.ಜಿ.ಹಳ್ಳಿ, **ವಾರ್ಡ್ ನಂ. 30ರಲ್ಲಿರುವ** ಅಂಬೇಡ್ಕರ್ ವೈದ್ಯಕೀಯ ಕಾಲೇಜಿನ ಹಿಂಭಾಗದಲ್ಲಿ ಚೈ: 1550.00 ಮೀ ಇಂದ 1800.00 ಮೀವರೆಗೆ ಸೆಕೆಂಡರಿ ಮಳೆ ನೀರು ಚರಂಡಿ ಹೆಚ್–306ಗಾಗಿ ಆರ್‌ಸಿಸಿ ರೀಟೈನಿಂಗ್ ಗೋಡೆಯ ನಿರ್ಮಾಣ. | 127.56 | 2,00,000/- |
| 6 | ಬೆಂಗಳೂರು, ಕೆ.ಜಿ.ಹಳ್ಳಿ, **ವಾರ್ಡ್ ನಂ. 30ರಲ್ಲಿರುವ** ಅಂಬೇಡ್ಕರ್ ವೈದ್ಯಕೀಯ ಕಾಲೇಜಿನ ಹಿಂಭಾಗದಲ್ಲಿ ಚೈ: 2000.00 ಮೀ ಇಂದ 2300.00 ಮೀವರೆಗೆ ಸೆಕೆಂಡರಿ ಮಳೆ ನೀರು ಚರಂಡಿ ಹೆಚ್–306ಗಾಗಿ ಆರ್‌ಸಿಸಿ ಬಾಕ್ಸ್ ಚರಂಡಿಯ ನಿರ್ಮಾಣ. | 152.71 | 2,29,000/- |
| 7 | ಬೆಂಗಳೂರು, ಕೆ.ಜಿ.ಹಳ್ಳಿ, **ವಾರ್ಡ್ ನಂ. 30ರಲ್ಲಿರುವ** ಅಂಬೇಡ್ಕರ್ ವೈದ್ಯಕೀಯ ಕಾಲೇಜಿನ ಹಿಂಭಾಗದಲ್ಲಿ ಚೈ: 1800.00 ಮೀ ಇಂದ 2000.00 ಮೀವರೆಗೆ ಸೆಕೆಂಡರಿ ಮಳೆ ನೀರು ಚರಂಡಿ ಹೆಚ್–306ಗಾಗಿ ಆರ್‌ಸಿಸಿ ಬಾಕ್ಸ್ ಚರಂಡಿಯ ನಿರ್ಮಾಣ. | 316.97 | 4,75,500/- |
| 8 | **ವಾರ್ಡ್ ನಂ. 61,** ಎಸ್.ಕೆ. ಗಾರ್ಡನ್‌ನಲ್ಲಿ ಚಲ್ಲಘಟ್ಟ ವ್ಯಾಲಿ ಪ್ಯಾಕೇಜ್–1ರಲ್ಲಿ ಚೈ: 1000.00 ಮೀ. ಇಂದ 1250.00 ಮೀವರೆಗೆ ಪ್ರೈಮರಿ ಚರಂಡಿ ಸಿ–200ಗಾಗಿ ಯು–ಆಕಾರದ ಆರ್‌ಸಿಸಿ ಚರಂಡಿಯ ನಿರ್ಮಾಣ. | 160.19 | 2,40,500/- |
| 9 | **ವಾರ್ಡ್ ನಂ. 61,** ಎಸ್.ಕೆ. ಗಾರ್ಡನ್‌ನಲ್ಲಿ ಚಲ್ಲಘಟ್ಟ ವ್ಯಾಲಿ ಪ್ಯಾಕೇಜ್–1ರಲ್ಲಿ ಚೈ: 1250.00 ಮೀ. ಇಂದ 1500.00 ಮೀವರೆಗೆ ಪ್ರೈಮರಿ ಚರಂಡಿ ಸಿ–200ಗಾಗಿ ಯು–ಆಕಾರದ ಆರ್‌ಸಿಸಿ ಚರಂಡಿಯ ನಿರ್ಮಾಣ. | 161.65 | 2,42,500/- |
| 10 | **ವಾರ್ಡ್ ನಂ. 22ರ** ವಿಶ್ವನಾಥ ನಾಗೇನಹಳ್ಳಿಯಲ್ಲಿ ಒಳಸೋಸುವಿಕೆ ಟ್ಯಾಂಕ್‌ನ ನಿರ್ಮಾಣ. | 96.59 | 1,93,500/- |
| 11 | **ಹೆಬ್ಬಾಳ ವ್ಯಾಲಿ ಪ್ಯಾಕೇಜ್–3ರಲ್ಲಿ** ಸೆಕೆಂಡರಿ ಎಸ್‌ಡಬ್ಲ್ಯುಡಿ ಹೆಚ್–306ಗಾಗಿ ಡಾ. ಅಂಬೇಡ್ಕರ್ ಮೆಡಿಕಲ್ ಕಾಲೇಜು ಆವರಣದಲ್ಲಿ ಬಾಕಿಯಿರುವ ಆರ್‌ಸಿಸಿ ರೀಟೈನಿಂಗ್ ಗೋಡೆಯ ನಿರ್ಮಾಣ. | 238.86 | 3,58,500/- |
| 12 | ಬಸವನಗರ ಮುಖ್ಯರಸ್ತೆಯಿಂದ ಅಂಬೇಡ್ಕರ್ ವೈದ್ಯಕೀಯ ಕಾಲೇಜು ಬಳಿ ಜೋಡಣೆಯಾಗುವ ಸೆಕೆಂಡರಿ ಎಸ್‌ಡಬ್ಲ್ಯುಡಿ ಹೆಚ್–306ವರೆಗೆ ಎಸ್‌ಡಬ್ಲ್ಯುಡಿಗಾಗಿ (ಕಳೆದುಹೋದ ಬಿಟ್) ಆರ್‌ಸಿಸಿ ಬಾಕ್ಸ್ ಚರಂಡಿಯ ನಿರ್ಮಾಣಕ್ಕೆ ಅಂದಾಜು ಪಟ್ಟಿ | 214.88 | 3,22,500/- |
| 13 | **ವಾರ್ಡ್ ನಂ. 20ರ** ಗಂಗಾನಗರದ ಗಂಗೇನಹಳ್ಳಿಯ 4, 5, 6 ಮತ್ತು 7ನೇ ಕ್ರಾಸ್‌ಗಳಲ್ಲಿ ಬಾಕ್ಸ್ ಚರಂಡಿಯ ನಿರ್ಮಾಣ. | 96.10 | 1,92,500/- |
| 14 | **ವಾರ್ಡ್ ನಂ. 46,** ಜಯಚಾಮರಾಜೇಂದ್ರನಗರದಲ್ಲಿ ಹೆಬ್ಬಾಳ ವ್ಯಾಲಿ ಪ್ಯಾಕೇಜ್–1ರ ಚೈ: 1000 ಮೀ ಇಂದ 1250ಮೀ ವರೆಗೆ ಪ್ರೈಮರಿ ಚರಂಡಿ ಹೆಚ್–100ಗಾಗಿ ಯು–ಆಕಾರದ ಆರ್‌ಸಿಸಿ ಚರಂಡಿಯ ನಿರ್ಮಾಣ. | 136.60 | 2,05,000/- |
| 15 | **ವಾರ್ಡ್ ನಂ. 46,** ಜಯಚಾಮರಾಜೇಂದ್ರನಗರದಲ್ಲಿ ಹೆಬ್ಬಾಳ ವ್ಯಾಲಿ ಪ್ಯಾಕೇಜ್–1ರ ಚೈ: 1250 ಮೀ ಇಂದ 1500ಮೀ ವರೆಗೆ ಪ್ರೈಮರಿ ಚರಂಡಿ ಹೆಚ್–100ಗಾಗಿ ಯು–ಆಕಾರದ ಆರ್‌ಸಿಸಿ ಚರಂಡಿಯ ನಿರ್ಮಾಣ. | 136.60 | 2,05,000/- |
| 16 | **ವಾರ್ಡ್ ನಂ. 46,** ಜಯಚಾಮರಾಜೇಂದ್ರನಗರದಲ್ಲಿ ಹೆಬ್ಬಾಳ ವ್ಯಾಲಿ ಪ್ಯಾಕೇಜ್–1ರ ಚೈ: 1500 ಮೀ ಇಂದ 1750ಮೀ ವರೆಗೆ ಯು–ಆಕಾರದ ಆರ್‌ಸಿಸಿ ಚರಂಡಿ ಹೆಚ್–100ರ ನಿರ್ಮಾಣ. | 159.80 | 2,40,000/- |
| 17 | **ವಾರ್ಡ್ ನಂ. 46,** ಜಯಚಾಮರಾಜೇಂದ್ರನಗರದಲ್ಲಿ ಹೆಬ್ಬಾಳ ವ್ಯಾಲಿ ಪ್ಯಾಕೇಜ್–1ರ ಚೈ: 1750 ಮೀ ಇಂದ 2000ಮೀ ವರೆಗೆ ಪ್ರೈಮರಿ ಚರಂಡಿ ಹೆಚ್–100ಗಾಗಿ ಯು–ಆಕಾರದ ಆರ್‌ಸಿಸಿ ಚರಂಡಿಯ ನಿರ್ಮಾಣ. | 159.80 | 2,40,000/- |

ಟೆಂಡರ್ ದಿನಾಂಕಗಳು : (1) ವಿಚಾರಣೆಗಳೇನಾದರೂ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಸಲ್ಲಿಸಬೇಕಾದ ದಿನಾಂಕ : **07.05.2012ರ ಸಂಜೆ 4.00 ಗಂಟೆಯವರೆಗೆ.** (2) ಪೂರ್ವ–ಬಿಡ್ ಸಭೆಯ ದಿನಾಂಕ: **08.05.2012ರ ಸಂಜೆ 4.00 ಗಂಟೆಗೆ.** (3) ಟೆಂಡರ್ ದಾಖಲೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **14.05.2012ರ ಸಂಜೆ 4.00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **16.05.2012ರ ಸಂಜೆ 4.00 ಗಂಟೆಗೆ.** (5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **18.05.2012ರ ಸಂಜೆ 4.00 ಗಂಟೆಗೆ.** ಬಿಡ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http:// eproc.karnataka.gov.in**ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಮೇಲ್ಕಂಡ ಕಚೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯುಡಿ ವಿಭಾಗ (ಪೂರ್ವ)

ಕರ್ನಾಟಕ ಸರ್ಕಾರ
## ಆಯುಕ್ತರ ಕಚೇರಿ
## ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ
ನಂ. 8, ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು – 560 052. ದೂರವಾಣಿ : 080–22262187
ಫ್ಯಾಕ್ಸ್ : 22267205 ಇ–ಮೇಲ್ : **foodcomkar@gmail.com**
ಸಂಖ್ಯೆ: ಸಿಎಫ್‌ಎಸ್/ಎಎಂಸಿ/ಸಿಆರ್/30/2012–13 ದಿನಾಂಕ : 13.04.2012

**ಟೆಂಡರ್ ಪ್ರಕಟಣೆ**

ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ನಂ. 8, ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು – 560 052 ರವರ ಕಚೇರಿಗೆ **ತುಮಕೂರು ಜಿಲ್ಲೆಯ ನ್ಯಾಯ ಬೆಲೆ ಅಂಗಡಿಗಳಲ್ಲಿ ಸ್ಥಾಪಿಸಲಿರುವ ಎಲೆಕ್ಟ್ರಾನಿಕ್ ತೂಕದ ಮತ್ತು ಮಾರಾಟ ಮಾಡುವ ಯಂತ್ರಕ್ಕೆ ಬೇಕಾಗುವ ಜಿ.ಎಸ್.ಎಂ. ಸಿಮ್ ಕಾರ್ಡ್ ಮತ್ತು ಮೋಡಮ್‌ಗಳನ್ನು** ಸರಬರಾಜು ಮಾಡಲು ದ್ವಿಲಕೋಟೆ ಪದ್ಧತಿಯ ಟೆಂಡರ್ ಪ್ರಕಟಣೆಯನ್ನು ಮಾಡಲಾಗಿದೆ. ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ **ದಿನಾಂಕ : 30.04.2012ರ ಮಧ್ಯಾಹ್ನ 3.00 ಗಂಟೆಯಾಗಿರುತ್ತದೆ.** ಟೆಂಡರ್ ಅರ್ಜಿಗಳನ್ನು ಕಚೇರಿಯ ಕೆಲಸದ ದಿನಗಳಲ್ಲಿ **ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ರೂ.100/–ಗಳ** ಡಿ.ಡಿ.ಯನ್ನು (ಹಿಂತಿರುಗಿಸಲಾಗದ) ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ನಂ. 8, ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು – 560 052 ರವರಿಗೆ ಸಲ್ಲಿಸಿ ಪಡೆಯಬಹುದಾಗಿದೆ. ಅಲ್ಲದೆ ಟೆಂಡರ್ ಅರ್ಜಿಗಳನ್ನು ಇಲಾಖೆಯ ವೆಬ್‌ಸೈಟ್ **http://ahara.kar.nic.in** ನಿಂದಲೂ ಸಹ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಸಹಿ/- ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಬೆಂಗಳೂರು

Government of Karnataka
## Department of Horticulture
**Karnataka State Horticulture Mission Agency (R)**
Office of the Mission Director, Lalbagh, Bangalore - 560 004
Tele Fax : 080-26577304 E-mail : **nhmkarnataka@gmail.com**
No: MD/KSHMA/ED/AHO-3/465/2011-12 Date: 29.03.2012

**TENDER NOTIFICATION**
(Through e-Procurement)

**SUB: Inviting Tender for fixing of rates based on the lowest rates and empanelling of Manufacturers and Distributors/Agencies for essential inputs used in Horticulture crops for the purpose of subsidy provided under NHM and other schemes/programmes of the Department of Horticulture for the year 2012-13 reg.**

The Karnataka State Horticulture Mission Agency (R) has invited Tenders through e-procurement vide reference cited above, for fixation of lowest rates of Essential Inputs from the manufacturers or their authorized State distributors only for Essential Inputs used in Horticulture crops for the purpose of subsidy provided under NHM and other schemes / programmes of the Dept. of Horticulture during 2012-13.

This Tender is called for the purpose of fixing of L-1 rates of Essential Inputs only. There should be only one L-1 rate for each product with minimum of one year shelf life wherever applicable. No other rates shall be entertained. **The inputs should be made available at all Districts/ Taluk / Hobli levels for the farmers to buy directly at more places.**

The Tender shall be uploaded in two parts namely Technical Bid & Commercial Bid.

Tender Forms may be downloaded from Government of Karnataka e-Procurement website: **eproc.karnataka.gov.in** from **16.04.2012** under login for tenderer. Aspiring tenderer who has not registered in e-procurement should register before participating through the website: **eproc.karnataka.gov.in**

Manufacturers / Authorized Distributors / Agents can access the application forms on the website, fill them with all relevant information, and submit the completed application forms in to electronic Tender on the website: **eproc.karnataka.gov.in** after submitting EMD and the Tender processing fee in the form of e-payment.

An Earnest Money Deposit (EMD) of **Rs. 50,000/- (Rupees fifty thousand only)** should be paid online through e-Procurement portal in the form of e-payments, using any of the following payment modes i.e., Credit Card, Direct Debit, National Electronic Fund Transfer (NEFT) or Over the Counter (OTC). **Application without EMD shall be rejected.**

The last date for uploading the Tender is **05.05.2012** up to **5.00 p.m.** The opening of Tender will be on **09.05.2012** commencing from **11.00 a.m.**for Technical scrutiny and Commercial bid will be opened at a later date (which will be intimated) in the Mini Meeting Hall of the Directorate of Horticulture, Lalbagh, Bangalore-560 004.

Pre-bid meeting will be conducted on **26.04.2012** for any clarification if needed. Help Desk: 080-25501216/ 25501227 or e-mail:hphelpdesk.blr@rteservices.com

**Sd/- Executive Director, KSHMA**